ದೆಹಲಿ ಕರ್ನಾಟಕ ಸಂಘದ

# ಅಭಿಮತ

ನವೆಂಬರ್ ೨೦೧೮
ಬೆಲೆ ರೂ. 1

25

ಬೆಳ್ಳಿ ಸಂಪುಟದ ವಿಶೇಷ ಸಂಚಿಕೆ

## ಇಪ್ಪತ್ತೈದು ವರ್ಷಗಳ ನೆನಪುಗಳ ಮೆಲುಕು

# ಐವತ್ತು ವರ್ಷಗಳಲ್ಲಿ ನಾ ಕಂಡು ಅನುಭವಿಸಿದ ಕನ್ನಡ ಸಂಘಗಳು

*ಭಾರತ ಸರ್ಕಾರದ ದೂರ ಸಂಪರ್ಕ ವಿಭಾಗದಲ್ಲಿ ಡೆಪ್ಯೂಟಿ ಡೈರೆಕ್ಟರ್ ಜನರಲ್ ಆಗಿ ಕೆಲಸ ನಿರ್ವಹಿಸಿದ **ಶ್ರೀ ಸಿ.ವಿ. ಗೋಪಿನಾಥ್** ಅವರು ಈಗ ದೆಹಲಿ ಸರ್ಕಾರಕ್ಕೆ ಮುಖ್ಯ ಸಲಹೆಗಾರರಾಗಿ ಕಾರ್ಯ ನಿರ್ವಹಿಸಿದ್ದಾರೆ. ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ಕೆಲಸ ಮಾಡಿ, ತಮ್ಮ ಅಧಿಕಾರವಧಿಯಲ್ಲಿ ಅಭಿಮತವನ್ನು ಹುಟ್ಟು ಹಾಕಿದ ಕೀರ್ತಿ ಇವರದು. ಭಾರತದ ಪ್ರಾಚೀನ ಚಿಂತನಕ್ರಮ, ಕ್ರಿಶ್ಚಿಯನ್, ಬೌದ್ಧ, ಸಿಖ್ ಮತ್ತು ಇಸ್ಲಾಂ ಧರ್ಮಗಳ ಕುರಿತು ಅಧಿಕೃತವಾಗಿ ಮಾತಾಡಬಲ್ಲ ಪ್ರಕಾಂಡ ಪಂಡಿತರಲ್ಲೊಬ್ಬರು. ಕನ್ನಡವಲ್ಲದೆ ತೆಲುಗು, ಹಿಂದಿ, ಗುಜರಾತಿ, ಮರಾಠಿ, ಮಲಯಾಳಂ, ಸಂಸ್ಕೃತ ಮತ್ತು ಇಂಗ್ಲಿಷ್‌ಗಳಲ್ಲಿ ನಿರರ್ಗಳವಾಗಿ ಮಾತಾಡಬಲ್ಲ –ಆಡಳಿತಗಾರರಾಗಿ ಕೆಲಸ ಮಾಡಿದ್ದಾರೆ. ಕರ್ನಾಟಕ ಸಂಸ್ಕೃತಿಗೆ ಇವರು ಕೊಡುಗೆಗೆ ರಾಜ್ಯ ಸರ್ಕಾರವು 2004ರ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ. ಭೋಪಾಲ, ಕಲ್ಕತ್ತ ಮೊದಲಾದೆಡೆ ಕನ್ನಡ ಸಂಘಗಳನ್ನು ಕಟ್ಟಿ ಬೆಳೆಸಿದ ಸಾಹಸಿ ಇವರು.*



*ಸಿ.ವಿ. ಗೋಪಿನಾಥ್*

ಎಪ್ಪತ್ತರ ಬಾಗಿಲಲ್ಲಿ ನಿಂತು, ನನಗೆ ಅರಿವು ಬಂದು, ಕನ್ನಡದ ಸ್ವಾಭಿಮಾನ, ಆದರ್ಶ, ಎದೆಯಾಳದಲ್ಲಿ ತುಡಿಯುವ ಇಪ್ಪತ್ತರ ತರುಣಾವಸ್ಥೆಯಿಂದ ಇಂದಿನವರೆಗಿನ "ಮೈನವಿರೇಳುವ" ಕನ್ನಡದ ಅನುಭವಗಳನ್ನು ಚಿಕ್ಕದಾಗಿ ಮತ್ತೊಮ್ಮೆ ಅನುಭವಿಸಿ ಹೇಳುವ ಸಣ್ಣ ಪ್ರಯತ್ನವನ್ನು ನಾನು ಇಲ್ಲಿ ಮಾಡುತ್ತಿದ್ದೇನೆ. ಭಾರತ ಸರ್ಕಾರದಲ್ಲಿ ಅಖಿಲ ಭಾರತ ಇಂಜಿನಿಯರಿಂಗ್ ಸೇವೆಗೆ ಸೇರಿದ ನಂತರ, ನಮ್ಮ ಬದುಕು ಒಂದು ಅಲೆಮಾರಿ ಬದುಕಿನಂತಾಯಿತು. ಕನ್ನಡನಾಡಿನಿಂದ ಹೊರಬಂದು, ಮೂರು ವರ್ಷಗಳ ಹೊರತು ನಲವತ್ತು ಮೂರು ವರ್ಷಗಳನ್ನು ನಾನು ಹೊರನಾಡಿನಲ್ಲಿ ಕಳೆದಿದ್ದೇನೆ. ಐದು ತಲೆಮಾರುಗಳ ಹಿಂದೆ ಆಂಧ್ರದಿಂದ ಮೈಸೂರು ಮಹಾರಾಜರ ಆಸ್ಥಾನಕ್ಕೆ ವಲಸೆ ಬಂದು ವೇದ ಪಾಠಶಾಲೆ ನಡೆಸಿದವರು ನನ್ನ ಪೂರ್ವಜರು. ಕೊನೆಯಲ್ಲಿ ಚಾಮರಾಜನಗರದಲ್ಲಿ ನೆಲೆಸಿದರು. ಮನೆಮಾತು ತೆಲುಗು. ಕನ್ನಡ ಬೆರತ ತೆಲುಗು ಮಾತನಾಡುವ ಅಭ್ಯಾಸ ನನ್ನ ತಲೆಮಾರಿಗೆ ನಿಂತು, ಮೊಮ್ಮಕ್ಕಳು ವಿದೇಶಗಳಲ್ಲಿ ನೆಲಸಿ ಮೈಸೂರಿಗೆ ಬಂದು ಆಗೊಮ್ಮೆ–ಈಗೊಮ್ಮೆ ಎರಡು ಕೈ ಮುಗಿದು "ತಾತ ಧನ್ಯವಾದಗಳು" ಎನ್ನುವಾಗ 'ಮೈಯುಬ್ಬಿ ಕೇಳ ಬೇಕಣ್ಣ' ಎನ್ನುವ ಭರತೇಶ ವೈಭವದ ಪದ್ಯ ನೆನಪಿಗೆ ಬಂದು, ಇನ್ನೊಂದು ತಲೆಮಾರಾದರೂ ನನ್ನ ಪೀಳಿಗೆಯಲ್ಲಿ ಕನ್ನಡ ಉಳಿಯಬಹುದು ಎನ್ನುವ ಭರವಸೆ ಮೂಡಿಬರುತ್ತದೆ. ನನ್ನ ಮಗ ಮರೆತ ತೆಲುಗನ್ನೂ ಪುನರುತ್ಥಾನಗೊಳಿಸಬೇಕೆಂಬ ಬಯಕೆ ನನ್ನದಲ್ಲ. ಮಗ–ಸೊಸೆ ಮಾತನಾಡುವ ಕನ್ನಡದಲ್ಲಿ ನಾನು ತೃಪ್ತ. ಮೊಮ್ಮಕ್ಕಳ ಕನ್ನಡ ನನಗೆ ಅತೀವ ಆನಂದ. ಈ ಹಿನ್ನೆಲೆಯಲ್ಲಿ ಕನ್ನಡದ ಅನುಭವವನ್ನು ಮೆಲುಕು ಹಾಕುತ್ತೇನೆ.

***ಕೇರಳದಲ್ಲಿ ಕನ್ನಡದ ಕಂಪು***

1965ರಲ್ಲಿ ಕೇರಳದ ತಿರುವನಂತಪುರದಲ್ಲಿ ಒಂದು ವರ್ಷ ಹೊರನಾಡ ಅನುಭವದ ಮೊದಲ ಪಾಠ. ಪಾಳಯಂನ ಹಳೆಯ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿ ನಿಲಯದಲ್ಲಿ ವಾಸ್ತವ್ಯ. ವಯಸ್ಸು ಇಪ್ಪತ್ತು ತುಂಬದಿದ್ದರೂ, ಕನ್ನಡ ಭಾಷೆಯ ಉತ್ಸಾಹ ಅದಮ್ಯ. ನಿಲಯದಲ್ಲಿ ಇದ್ದ ಅನೇಕ ಭಾಷೆಗಳನ್ನು ಮಾತನಾಡುವ ಸುಮಾರು ಮುನ್ನೂರು ಮಂದಿಯಲ್ಲಿ ನಾವು ಇಪ್ಪತ್ತಮೂರು ಜನ ಕನ್ನಡದವರು. ಅದರಲ್ಲಿ ತೆಲುಗು ಬೆರೆಸಿ ಕನ್ನಡ ಮಾತನಾಡುವ ಬಳ್ಳಾರಿಯ ವೇಣುಗೋಪಾಲ್, ಉರ್ದು ಭಾಷೆ ಬೆರೆಸಿ ಮಾತನಾಡುವ ಗುಲಬರ್ಗಾದ ಮುಂಡೇವಾಡಿ, ಗಂಡು ಭಾಷೆ ಎಂದು ಕೊಚ್ಚಿಕೊಂಡು, ಪುರಷತ್ವದ ಕೆಲವು ಪದಗಳನ್ನು ಸ್ತ್ರೀಲಿಂಗ ರೂಪದಲ್ಲಿ ಬಳಸುವ ಧಾರವಾಡದ ದೇಸಾಯಿ, ಮಂಗಳೂರಿನ ದಾನೆ ಮಾರಾಯ ಸೀತಾರಾಮ ಮೂರ್ತಿ, ಶುದ್ಧ ಕನ್ನಡ ಮಾತನಾಡುತ್ತಿದ್ದ ಹಾಸನದ ಮುಸ್ಲಿಮ ಅಜೀಜ್, ಆಂಗ್ಲ ಭಾಷೆಯ ಪದಗಳನ್ನು ಬೇಕಂತಲೇ ಬೆರಸುವ ಬೆಂಗಳೂರಿನ ಆನಂದ, ಗುರುಗಳಾದ ವೆಂಕಟರಮಯ್ಯನವರು, ಸೊಗಸಾಗಿ ಕನ್ನಡ ಮಾತನಾಡುತ್ತಿದ್ದ ಗುರುಗಳೂ ಹಾಗೂ ಪುಣೆಯವರೂ ಆದ ಅರುಗೋಳ್ಕರ್ ಅವರು ಮತ್ತು ಇತರರು– ಎಲ್ಲರನ್ನೂ ಸೇರಿಸಿ ಕನ್ನಡ ಸಂಘವೊಂದನ್ನು ಕಟ್ಟಿದೆ. ಹದಿನೈದು ದಿನಕ್ಕೊಮ್ಮೆ ಎಲ್ಲರ ಭೇಟಿ ನಿಲಯದ ಹುಲ್ಲುಗಾವಲಿನಲ್ಲಿ. ಸಂಘಕ್ಕೆ ನಾನೇ ಕಾರ್ಯದರ್ಶಿ. ತಿಂಗಳಿಗೊಮ್ಮೆ ರೈಲ್ವೇ ನಿಲ್ದಾಣದಲ್ಲಿ ಇದ್ದ ಐಯ್ಯರ್ ಕ್ಯಾಂಟೀನ್‌ನಲ್ಲಿ ಬಿಳಿ ಅಕ್ಕಿಯ ಅನ್ನ (ವಿದ್ಯಾರ್ಥಿನಿಲಯದಲ್ಲಿ



ಕುಸುಬಲಕ್ಕಿಯ ಅನ್ನ) ತಿನ್ನುವ ಭೋಜನಕೂಟ. ಹಾಸ್ಯ, ನಗೆ ಚಾಟಿಕೆ, ಕನ್ನಡ ಪದ್ಯಗಳ ಪಠನ, ಓದಿದ್ದ ಕನ್ನಡ ಕಾವ್ಯಗಳು, ಕಾದಂಬರಿಗಳ ಬಗ್ಗೆ ಚರ್ಚೆ. ವಿಜ್ಞಾನದ ವಿದ್ಯಾರ್ಥಿಯಾಗಿದ್ದರೂ, ಕನ್ನಡ ಚೆನ್ನಾಗಿ ಮಾತನಾಡುವ ನನ್ನ ಬಗ್ಗೆ ಎಲ್ಲರಿಗೂ ಅಭಿಮಾನ. ಕನ್ನಡ ಸಂಘ ಬೆಳೆಯಿತು. ತುಂಬಾ ರಾಕೆಟ್ ಲಾಂಚಿಂಗ್ ಸ್ಟೇಷನ್‌ನಲ್ಲಿ ಕೆಲಸ ಮಾಡುತ್ತಿದ್ದ ಹನ್ನೆರಡು ಮಂದಿ ನಮ್ಮನ್ನು ಸೇರಿದರು. ಮಂಗಳೂರಿನ ಕೆ.ಎಲ್. ರಾವ್ ಅನ್ನುವ ಐ.ಎ.ಎಸ್. ಅಧಿಕಾರಿಗಳು ಕೇರಳದ ಸರ್ಕಾರದಲ್ಲಿ ಕೆಲಸ ಮಾಡುತ್ತಿದ್ದರು. ಅವರೂ ಸಹ ನಮ್ಮ ಸಂಘವನ್ನು ಸೇರಿದರು. ಕನ್ನಡದ ಕವಿತೆಗಳು, ಗೋಪಾಲಕೃಷ್ಣ ಅಡಿಗರ ಪದ್ಯಗಳೆಂದರೆ ಅವರಿಗೆ ಬಹಳ ಇಷ್ಟ. ನನಗೆ ತಿಳಿದಿದ್ದ ಕೆಲವೇ ಪದ್ಯಗಳನ್ನು ಪುನಃ ಪುನಃ ಹೇಳಿಸುತ್ತಿದ್ದರು. 'ಯಾವ ಮೋಹನ ಮುರಳಿ ಕರೆಯಿತು' ಪದ್ಯದ ಅರ್ಥ ವಿವರಿಸುತ್ತಾ, ಕೊನೆಯ ಸಾಲುಗಳಿಗೆ ನಾನು ಮಾಡುತ್ತಿದ್ದ ಆಧ್ಯಾತ್ಮಿಕ ವಿವರಣೆ ಅವರಿಗೆ ಹಿಡಿಸಿತ್ತು. ತಿರುವನಂತಪುರ ಬಿಟ್ಟು, ಇಪ್ಪತ್ತೆರಡು ವರ್ಷಗಳ ನಂತರ ನಾನು 1987ರಲ್ಲಿ ಅಲ್ಲಿಗೆ ಹೋದಾಗ ಅವರು ಸರ್ಕಾರದ ಪ್ರಧಾನ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದರು. ಅವರ ಕಾರ್ಯಾಲಯಕ್ಕೆ ದೂರವಾಣಿಯ ಸಂಪರ್ಕ ಬೆಳೆಸಿ, "ನಾನು ದೆಹಲಿಯ ದೂರಸಂಪರ್ಕ ಮಂತ್ರಾಲಯದಲ್ಲಿ ನಿರ್ದೇಶಕ, ನನ್ನ ಹೆಸರು ಗೋಪಿನಾಥ್, ನಾನು ಪ್ರಧಾನ ಕಾರ್ಯದರ್ಶಿ ಅವರೊಂದಿಗೆ ಮಾತನಾಡಬಹುದೇ" ಎಂದು ಕೇಳಿದೆ. ದೂರವಾಣಿಯನ್ನು ಅವರೇ ನೇರವಾಗಿ ಎತ್ತಿದ್ದರು ಎಂದು ಕಾಣುತ್ತಿದೆ. "ಯಾರು? ಅಡಿಗರ ಪದ್ಯ ಹೇಳುವ ಗೋಪಿನಾಥ್ ನೀನಾ? ಯಾವಾಗ ಬಂದೆ? ಮನೆಗೆ ಇಂದು ರಾತ್ರಿ ಊಟಕ್ಕೆ ಬಾ, ಕಾರು ಎಲ್ಲಿಗೆ ಕಳಿಸಲಿ?" ಎಂದರು. ರಾತ್ರಿಯ ಭೋಜನದ ವೇಳೆ ಬಹಳಷ್ಟು ಮಾತನಾಡಿದೆವು. ಸರ್ಕಾರಿ ವಲಯಗಳಲ್ಲಿ ಆಗ ಬಹಳ ಚರ್ಚೆಯಲ್ಲಿದ್ದ "ಬೋಫೋರ್ಸ್ ಹಗರಣ"ದ ಬಗ್ಗೆ ಮಾತನಾಡಿದಾಗ, ಸರ್ಕಾರದಲ್ಲಿ ಒಳಗೊಳಗೆ ನಡೆಯುವ, ಬಹಿರಂಗವಾಗದ ಭ್ರಷ್ಟಾಚಾರದ ಅನೇಕ ಹಗರಣಗಳನ್ನು ತಿಳಿಯ ಹೇಳಿದರು. ಕಲುಷಿತವಾಗುತ್ತಿದ್ದ ಕರ್ನಾಟಕ ರಾಜ್ಯದ ವಾತಾವರಣದ ಬಗ್ಗೆ ಕಳಕಳಿಯಿಂದ ಮಾತನಾಡಿದರು. ನನ್ನ ನೆನಪಿನಲ್ಲಿ ತಿರುವನಂತಪುರದ ಕನ್ನಡ ಸಂಘ ಯಾವ ಕ್ಲೇಶಗಳೂ ಇಲ್ಲದ, ಸ್ವಾರ್ಥವೂ ಇಲ್ಲದ, ಪರಸ್ಪರ ಪ್ರೀತಿಯ, ಎಲ್ಲರ ನಡುವಿನ ತಂತು ಕನ್ನಡವೇ ಆದ ಸವಿನೆನಪಿನ ಸಂಘ.

### *ಬೆಂಗಳೂರಿನ ಅಂಚೆ-ತಂತಿ ಕನ್ನಡ ಕಲಾಕೂಟ*

ನಾನು ಬೆಂಗಳೂರು ತಲುಪುವ ಮುಂಚೆಯೇ ಚೆನ್ನಾಗಿ ವ್ಯವಸ್ಥೆಯಲ್ಲಿದ್ದ ಸಂಘ. ನಾನು ಸಂಘಕ್ಕೆ ಸದಸ್ಯನಾದೆ. ಈ ಸಂಘದ ಚಟುವಟಿಕೆಗಳು ಮುಖ್ಯವಾಗಿ ನಾಟಕವಾಡುವುದಾಗಿತ್ತು. ನನ್ನನ್ನೂ ಪಂಚಭೂತ ನಾಟಕವಾಡಲು, ಪಾತ್ರ ನೀಡಿ



> **ಮಗ-ಸೊಸೆ ಮಾತನಾಡುವ ಕನ್ನಡದಲ್ಲಿ ನಾನು ತೃಪ್ತ. ಮೊಮ್ಮಕ್ಕಳ ಕನ್ನಡ ನನಗೆ ಅತೀವ ಆನಂದ. ಈ ಹಿನ್ನೆಲೆಯಲ್ಲಿ ಕನ್ನಡದ ಅನುಭವವನ್ನು ಮೆಲುಕು ಹಾಕುತ್ತೇನೆ**

ಸೇರಿಸಿಕೊಂಡರು. ಸಂಗೀತಗಾರನ ಪಾತ್ರ, ಬಹಳ ಯಶಸ್ವಿಯಾಗಿ ನಿರ್ವಹಿಸಿದೆ. ಅದರ ಪ್ರಭಾವ ಎಷ್ಟೆಂದರೆ, ಮುಂದೆ ನಡೆದ ಚುನಾವಣೆಯಲ್ಲಿ ನನ್ನನ್ನು ಸಂಘದ ಉಪಾಧ್ಯಕ್ಷನನ್ನಾಗಿ ಮಾಡಿದರು. ಕೆಲವು ನಾಟಕ ಸ್ಪರ್ಧೆಗಳಲ್ಲಿ ಬಹುಮಾನ ಬಂದಿತು. ನಾಟಕ ಬಿಟ್ಟರೆ ಬೇರೆ ಯಾವ ಸಾಹಿತ್ಯಕ ಚಟುವಟಿಕೆಗಳು ಇರಲಿಲ್ಲ. ಸಮಯ ಕಳೆಯಲು, ಸ್ನೇಹಿಗಳ ಒಂದು ವೇದಿಕೆಯಾಗಿತ್ತು. ಈ ಹಿನ್ನೆಲೆಯಲ್ಲಿ ನಾನು ನಂತರದ ದಿನಗಳಲ್ಲಿ ವಿಶ್ವನಾಥ ಮಿರ್ಲೆ ನಿರ್ದೇಶಿಸಿದ ಗಂಭೀರವಾದ ನಾಟಕಗಳಾದ ಬಾದಲ್ ಸರ್ಕಾರ ಅವರ "ಅಂಧಾಯುಗ್" ಮತ್ತು ಕಮ್ಯೂನಿಸಂ ಕ್ರಾಂತಿಯ "ತಾಯಿ" ನಾಟಕಗಳಲ್ಲಿ ಮುಖ್ಯಪಾತ್ರಗಳನ್ನೂ ಧರಿಸಿ ಮನಸ್ಸಿಗೆ ತೃಪ್ತಿ ದೊರೆಯಿತು. ಈ ಕನ್ನಡ ಕಲಾಕೂಟದ ನೆನಪು ನಾಟಕಗಳಿಗೆ ಮಾತ್ರ ಸೀಮಿತವಾಗಿದೆ.

### *ಜಬ್ಬಲಪುರದ ಕರ್ನಾಟಕ ಸಂಘ*

ಬೆಂಗಳೂರಿನಿಂದ ಎರಡು ಹಗಲು-ಎರಡು ರಾತ್ರಿಗಳನ್ನು ರೈಲಿನಲ್ಲಿ ಪ್ರಯಾಣ ಮಾಡಿ ಮದ್ರಾಸ್ ಮತ್ತು ಇಟಾರ್ಸಿಯಲ್ಲಿ ರೈಲು ಬದಲಿಸಿ ಮೂರನೆಯ ಮಧ್ಯರಾತ್ರಿಯಲ್ಲಿ ಜಬ್ಬಲ್‌ಪುರ ತಲುಪಿದೆ. ತಮಿಳುನಾಡಿನ ನನ್ನ ಸ್ನೇಹಿತರಾದ ರಾಜಗೋಪಾಲನ್ ಅವರು ಬೆಳಿಗ್ಗೆ ರೈಲು ನಿಲ್ದಾಣಕ್ಕೆ ಬಂದು ನನ್ನನ್ನು ಕರೆದೊಯ್ದರು. ಭಾರತದಲ್ಲೇ ಅತಿ ದೊಡ್ಡದಾಗಿದ್ದ ದೂರ ಸಂಪರ್ಕ ಇಲಾಖೆಯ ಶಿಕ್ಷಣಕೇಂದ್ರ. ಅಲ್ಲಿ ನನಗೆ ತರಬೇತಿ. ಅಲ್ಲಿ ಕನ್ನಡದವರು ಇಬ್ಬರು ಇದ್ದರೂ ಅಂತಹ ಪ್ರೀತಿ ತೋರಿಸಲಿಲ್ಲ. ಜಬ್ಬಲಪುರದ ದಂಡಿನಲ್ಲಿ ಒಮ್ಮೆ ನಡೆಯುತ್ತಿದ್ದಾಗ ಕನ್ನಡ ಮಾತನಾಡುವವರನ್ನು ಕಂಡು ಮಾತನಾಡಿಸಿದೆ. ಅವರಿಬ್ಬರೂ ನನ್ನಂತೆಯೇ ಬ್ರಹ್ಮಚಾರಿಗಳೂ ಹಾಗೂ ಇಂಜಿನಿಯರ್‌ಗಳೂ ಆಗಿದ್ದರು. ಮಿಲಿಟರಿ ಇಂಜಿನಿಯರ್ ಸೇವೆಗೆ ಸೇರಿದ್ದವರು. ಮನೆಗೆ ಕರೆದೊಯ್ದು ಅಡಿಗೆ ಮಾಡಿ ಊಟ ಮಾಡಿಸಿದರು. ನನ್ನ ತಾಯಿಯಿಂದ ಅಡಿಗೆ ಕಲಿತಿದ್ದ ನಾನು ಭಾನುವಾರದ ದಿನಗಳಂದು ಅಡಿಗೆ ಮಾಡಿ ಊಟ ಮಾಡಿ ಸಮಯ ಕಳೆಯಲು ಅವರನ್ನು ಸೇರಿದೆ. ಬಹಳ ಆತ್ಮೀಯವಾಗಿ ನಡೆದುಕೊಂಡವರು, ನನಗಿಂತ ವಯಸ್ಸಿನಲ್ಲಿ 4-5 ವರ್ಷಗಳು ಹಿರಿಯರಾದ ರಾಮಕೃಷ್ಣ ಅವರು. ಮಲೆನಾಡಿನ ಇವರಿಗೆ ಕನ್ನಡದ ಮೇಲೆ ಅಪಾರವಾದ ಪ್ರೀತಿ. ಕಾರಂತರೂ, ಅಡಿಗರೂ, ಅನಂತಮೂರ್ತಿಯವರುಗಳನ್ನೂ ಓದಿ ತಿಳಿದುಕೊಂಡವರು. ಸಮಾನರುಚಿ ಸ್ನೇಹದಲ್ಲಿ ಬೆಸುಗೆ ಆಯಿತು. ಮೂವತ್ತು ವರ್ಷಗಳ ನಂತರ ನಮ್ಮಿಬ್ಬರ ಸಂಬಂಧದಲ್ಲಿ ಮಾರ್ಪಟ್ಟಿತು. ಅವರ ಮಗಳು ಲಕ್ಷ್ಮೀ ನನ್ನ ಸೊಸೆಯಾದಳು. ರಾಮಕೃಷ್ಣ ಈ ಜಗತ್ತಿನಲ್ಲಿಲ್ಲ. ಆದರೆ ಆ ಸವಿನೆನಪುಗಳನ್ನೂ ಲಕ್ಷ್ಮೀಯೊಡನೆ ಕುಳಿತು ಕೆಲವೊಮ್ಮೆ ನೆನಪು ಮಾಡಿಕೊಳ್ಳುತ್ತೇನೆ. ನಾನು ಮದುವೆಯಾಗಬೇಕೆಂದಿದ್ದ ಹುಡುಗಿಯ ಬಗ್ಗೆ ಚುಡಾಯಿಸಿ, ನನ್ನ ಕೆನ್ನೆ ಕೆಂಪಾದಾಗ, "ಉದಯ ಗಗನದಲಿ ಅರುಣನ ಛಾಯೆ" ಎಂದು ಹಾಡುತ್ತಿದ್ದ ರಾಮಕೃಷ್ಣ ನನ್ನ ಬದುಕಿನಲ್ಲಿ ಬಹಳ ದೊಡ್ಡ ಕೊಡುಗೆ. ಅವರು

ನನ್ನನ್ನು ಜಬ್ಬಲಪುರದ ಕರ್ನಾಟಕ ಸಂಘಕ್ಕೆ ಕರೆದೊಯ್ದರು. ಸಂಘದ ಸಭೆಯಲ್ಲಿ ನನ್ನ ಪರಿಚಯವನ್ನೂ ನಾನೇ ಮಾಡಿಕೊಳ್ಳುವಂತೆ ಮಾಡಿದರು. ಫಲಿತಾಂಶ ಒಂದೇ ತಿಂಗಳಲ್ಲಿ ನನ್ನನ್ನು ಕಾರ್ಯದರ್ಶಿಯನ್ನಾಗಿ ಮಾಡಿತು. ಸಂಘದ ಅಧ್ಯಕ್ಷರು ನಿವೃತ್ತ ಗಾರಿಸನ್ ಇಂಜಿನಿಯರ್ ಟಿ.ಎನ್. ಐಯ್ಯಂಗಾರ್ ಅವರು, ಪ್ರೀತಿ ಮತ್ತು ಸ್ನೇಹಕ್ಕೆ ಮೂರ್ತಿಸ್ವರೂಪ. ಸಂಘದಲ್ಲಿ ಬಹಳ ದೊಡ್ಡ ದೊಡ್ಡ ವ್ಯಕ್ತಿಗಳಿದ್ದರು. ಬೆಂಗಳೂರಿನಲ್ಲಿ ಅಕೌಂಟೆಂಟ್ ಜನರಲ್ ಆಗಿದ್ದ ಶ್ರೀ ವೀರಯ್ಯನವರು, ಸರ್ವೇ ಆಫ್ ಇಂಡಿಯಾದ ಡೈರೆಕ್ಟರ್ ಜನರಲ್ ಆಗಿದ್ದ ಶ್ರೀ ರುಕ್ಮಾಂಗದರಾಯರು, ಮಧ್ಯಪ್ರದೇಶದ ಎಲೆಕ್ಟ್ರಿಸಿಟಿ ಬೋರ್ಡಿನ ಸದಸ್ಯರಾಗಿದ್ದ ಶ್ರೀ ಕೃಷ್ಣಸ್ವಾಮಿ ಐಯ್ಯಂಗಾರ್ ಅವರು, ಹೆಸರಾಂತ ಮನೋವಿಜ್ಞಾನಿಗಳಾಗಿದ್ದ ಶಂಕರನಾರಾಯಣ ರಾವ್ ಅವರು ಇನ್ನೂ ಅನೇಕಾನೇಕ ಮಂದಿ ದಂಡಕಾರಣ್ಯ ಪ್ರಾಜೆಕ್ಟ್‌ಗೆ ಬಂದಿದ್ದ ಇಂಜಿನಿಯರ್‌ಗಳು, ಮಿಲಿಟರಿ ಏ.ಎಸ್.ಸಿ., ಮುಖ್ಯಾಲಯದ ಅಧಿಕಾರಿವರ್ಗದವರು–ಬಹಳ ಮಂದಿ ಕರ್ನಾಟಕ ಸಂಘಕ್ಕೆ ಬಂದವರು. ಚಟುವಟಿಕೆಗಳು ಬಹುಮುಖವಾಗಿತ್ತು. ಹೆಸರಾಂತ ಕರ್ನಾಟಕ–ಹಿಂದೂಸ್ತಾನಿ ಗಾಯಕರು, ನಾಟಕ ತಂಡದವರು ಬಂದರು. ಸಾಹಿತ್ಯಕ ಚಟುವಟಿಕೆಗಳು, ಉಗಾದಿ ಹಬ್ಬದ ಪಿಕ್‌ನಿಕ್‌ಗಳೂ, ರಾಮನವಮಿಯ ಸಹಭೋಜನ ಇವೆಲ್ಲವನ್ನು ಎರಡು ವರ್ಷ ಬ್ರಹ್ಮಚಾರಿಯಾಗಿ, ಎರಡು ವರ್ಷ ಗೃಹಸ್ಥನಾಗಿ ಸವಿದೆ.

ನನಗೆ ಅಚ್ಚಳಿಯದ ನೆನಪೆಂದರೆ ಅಂದಿನ ಮಧ್ಯಪ್ರದೇಶದ ರಾಜ್ಯಪಾಲ ಹಾಗೂ ಮೈಸೂರು ರಾಜ್ಯದ ಮೊದಲ ಮುಖ್ಯಮಂತ್ರಿಯವರಾಗಿದ್ದ ಶ್ರೀ ಕೆ. ಚೆಂಗಲರಾಯ ರೆಡ್ಡಿಯವರು ನಮ್ಮ ಸಂಘಕ್ಕೆ ಭೇಟಿ ನೀಡಿದ್ದು. ಕಾರ್ಯದರ್ಶಿಯಾಗಿ ನಾನು ಸಂಘದ ಚಟುವಟಿಕೆಗಳನ್ನು ವರದಿ ಮಾಡಬೇಕಿತ್ತು. ಯಾವ ಚೀಟಿ–ಕಾಗದಗಳ ಸಹಾಯವಿಲ್ಲದೆ ನಾನು ನಿರರ್ಗಳವಾಗಿ ಹದಿನೈದು ನಿಮಿಷಗಳು ಕನ್ನಡದಲ್ಲಿ ಮಾತನಾಡಿದೆ. ರಾಜ್ಯಪಾಲರು ವೇದಿಕೆ ಬಿಟ್ಟು ಬಂದು ನನ್ನನ್ನು ತಬ್ಬಿಕೊಂಡರು. ಸಭಿಕರೆಲ್ಲ ಎದ್ದುನಿಂತು ಕರತಾಡನ ಮಾಡಿದರು. ಅವರೆಲ್ಲರ ಕನ್ನಡದ ಅಭಿಮಾನಕ್ಕೆ ಎಲ್ಲೆ ಇಲ್ಲ. ಮನೆಯಲ್ಲಿ ಮರಾಠಿ ಮಾತನಾಡುತ್ತಿದ್ದ ಮಲ್ಲಪ್ಪಶಿಂತ್ರೆ ಅವರು ತಮ್ಮ ಪೂರ್ವಜರು ಕನ್ನಡದವರೆಂದು ಹೆಮ್ಮೆಪಡುತ್ತಾ, ಬರುತ್ತಿದ್ದ ಅಲ್ಪ ಸ್ವಲ್ಪ ಕನ್ನಡ ಮಾತನಾಡುತ್ತಾ ಎಲ್ಲ ಕಾರ್ಯಕ್ರಮಗಳಿಗೆ ಬರುತ್ತಿದ್ದರು. ಮಿಲಿಟರಿ ಕಂಟ್ರಾಕ್ಟರ್ ಆಗಿದ್ದ ಅವರು ಬಹುತೇಕ ಸಭೆ ಸಮಾರಂಭಗಳ ಖರ್ಚನ್ನು ನಿಭಾಯಿಸುತ್ತಿದ್ದರು. ಖರ್ಚಿಗಾಗಿ ಸೊವಿನರ್ ಮಾಡುವ–ಹಣ ಸಂಪಾದನೆ ಮಾಡುವ ಸಂಸ್ಕೃತಿಯ ಪಿಡುಗು ಅಂದಿನ ಕಾಲದಲ್ಲಿ ಬಂದಿರಲಿಲ್ಲ. ಹಿರಿಯರಾದವರು ಸ್ಥಿತವಂತರು ಯಾರೂ ಕೇಳದೆ ತಮ್ಮಿಂದ ತಾವೇ ಹಣಕೊಡುತ್ತಿದ್ದರು. ESSO ಕಂಪನಿಯಲ್ಲಿ ಮುಖ್ಯಮ್ಯಾನೇಜರ್ ಆಗಿದ್ದ ಶಾಸ್ತ್ರಿಗಳದ್ದು ಬಹಳ ಧಾರಾಳ ಸ್ವಭಾವ. ನಮ್ಮಂಥ ಬ್ರಹ್ಮಚಾರಿಗಳನ್ನು ಭಾನುವಾರದ ದಿನ ಊಟಕ್ಕೆ ಕರೆಯುತ್ತಿದ್ದರು. ಅವರ ಮನೆಯಲ್ಲಿ ನಾಲ್ಕು ಹೆಣ್ಣು ಮಕ್ಕಳಿದ್ದರು. ತೀರ ಮಡಿವಂತಿಕೆ ಇಲ್ಲದೆ ಎಲ್ಲರೊಡನೆ ಬೆರೆತು ಬಂದು ಕೌಟುಂಬಿಕ ವಾತಾವರಣವನ್ನು ಸೃಷ್ಟಿಮಾಡುತ್ತಿದ್ದರು. ಅಧ್ಯಕ್ಷರಾಗಿದ್ದ ತಿರಮಕೂಡಲು ನಾರಾಯಣ ಐಯ್ಯಂಗಾರ್ ಅವರ ಕನ್ನಡದ ಅಭಿಮಾನ, ಕೌಟುಂಬಿಕ ವಾತಾವರಣ ಎಕ್ಸಿಕ್ಯೂಟಿವ್ ಇಂಜಿನಿಯರ್ ಆಗಿದ್ದ ನಂಜುಂಡಯ್ಯನವರು ನಮ್ಮ ಮೇಲೆ ತೋರಿದ ಮಮತೆ, ಪಾಲಿಟೆಕ್ನಿಕ್ ಪ್ರಾಂಶುಪಾಲರಾಗಿದ್ದ ರಾಮಚಂದ್ರ ಅವರು ಹೆಂಡತಿಯ ಹೆದರಿಕೆಗೆ ಮರೆಮಾಚಿ ಕುಡಿಯುತ್ತಿದ್ದ ಸಿಗರೇಟ್, ಯಾವಾಗಲೂ ತಲೆತಗ್ಗಿಸಿ, ಯಾವುದೋ ಧ್ಯಾನದಲ್ಲಿ ಇರುತ್ತಿದ್ದ ಮನೋವಿಜ್ಞಾನಿ ಶಂಕರ ನಾರಾಯಣ ರಾಯರು–ಇವರೆಲ್ಲರ ನಿರ್ವಾಜ್ಯ–ನಿಃಸ್ವಾರ್ಥ ಕನ್ನಡದ ಒಲವು ಜಬ್ಬಲಪುರದ ಕರ್ನಾಟಕ ಸಂಘದ ಛಾಪನ್ನು ನನ್ನ ಮನದಾಳದಲ್ಲಿ ಮೂಡಿಸಿದೆ.

### *ಅಹಮದಾಬಾದಿನ ಕನ್ನಡ ಸಂಘ*

ಇಲ್ಲಿಗೆ ಬರುವ ಮುಂಚೆ ತಮಿಳುನಾಡಿನ ಅಂದಿನ ಮದ್ರಾಸ್‌ನಲ್ಲಿ ನಾನು ಎಂಟು ತಿಂಗಳು ಕಳೆದೆನಾದರೂ ಎಂದೂ ಅಲ್ಲಿಯ ಕರ್ನಾಟಕ ಸಂಘಕ್ಕೆ ಹೋದವನಲ್ಲ. ಸಂಸಾರಿಯಾಗಿದ್ದರೂ ಒಬ್ಬನೇ ಇರುತ್ತಿದ್ದರಿಂದ ರಜೆ ಬಂದರೆ ಕೋಲಾರಕ್ಕೆ ಮಡದಿ ಮಕ್ಕಳನ್ನು ನೋಡಲು ಓಡುತ್ತಿದ್ದೆ. ಸಂಜೆಯ ವೇಳೆ ಬೇರೆ ದಿನಗಳಲ್ಲಿ ಕಸ್ಟಮ್ಸ್ ಆಫೀಸರ್ಸ್ ಕ್ಲಬ್ಬಿನಲ್ಲಿ ಇಸ್ಪೀಟು ಆಡುತ್ತಿದ್ದೆ. ಬಹಳ ಮಂದಿ ತೆಲುಗರೂ ಸಹ ಇದ್ದರು. ಆದ್ದರಿಂದ ಕಷ್ಟವೆನಿಸಲಿಲ್ಲ. ಈ ಎಂಟು ತಿಂಗಳಲ್ಲಿ ಸಭೆಯಲ್ಲಿ ನಿಂತು ಮಾತನಾಡಬಲ್ಲ ತಮಿಳನ್ನು ಕಲಿತೆ. ತಮ್ಮದೇ ಹೆಗ್ಗಳಿಕೆಯನ್ನೂ ಕೊಚ್ಚಿಕೊಳ್ಳುವ ತಮಿಳರ ಸಂಸ್ಕೃತಿ ನನಗೆ ಹಿಡಿಸಲಿಲ್ಲ. ಅಹಮದಾಬಾದ್ ಸೇರಿದ ಎರಡನೇ ದಿನವೇ ಬ್ಯಾಂಕಿನಲ್ಲಿ ಕನ್ನಡದವರ ಪರಿಚಯ ಆಯಿತು. ಕನ್ನಡ ಸಂಘ ಇರುವುದೂ ತಿಳಿದು ಬಂದಿತು. ಸಂಘಕ್ಕೆ ಕಾರ್ಯಕ್ರಮಕ್ಕೆ ಹೋದೆ. ಬಹಳ ಜನರ ಪರಿಚಯವಾಯಿತು. ಆದರೆ ಅಲ್ಲಿಯ ಒಡಕುಗಳು ಆಗಲೇ ಕಾಣಿಸುತ್ತಿತ್ತು. ಹುಬ್ಬಳ್ಳಿ–ಧಾರವಾಡದವರ ಗುಂಪು ಬೇರೆ–ಮಂಗಳೂರಿನವರ ಗುಂಪು ಬೇರೆ–ಹಳೇ ಮೈಸೂರಿನವರ ಗುಂಪು ಬೇರೆ–ಅಧಿಕಾರಿವರ್ಗದವರ ಗುಂಪು ಬೇರೆ. ಆದರೆ ಸಂಘದ ಹಿರಿಯರು ಸಮನ್ವಯ ಮಾಡುತ್ತಿದ್ದರು. ಅಲ್ಲಿಯೇ ನೆಲಸಿ ವೈದ್ಯಕೀಯ ವೃತಿಯಲ್ಲಿದ್ದ ಡಾ. ದಿಗ್ಗಾವೆ ಅವರು ಸಂಘದ ಅಧ್ಯಕ್ಷರಾಗಿದ್ದರು. ಮಕ್ಕಳ ದಿನಾಚರಣೆಯ ಅಂಗವಾಗಿ ಮಕ್ಕಳಿಗೆ ಕುಶಲತೆ ಸ್ಪರ್ಧೆ ಏರ್ಪಾಡು ಮಾಡಿದ್ದರು. ವೇದಿಕೆಯಲ್ಲಿ ಸಮನ್ವಯ ಮಾಡುವವರು ಯಾರೂ ಇರಲಿಲ್ಲ. ಆದ್ದರಿಂದ ಗೊಂದಲವಾಗುತ್ತಿತ್ತು. ಹದಿನೈದು ನಿಮಿಷಗಳು ನೋಡಿದ ನಾನು ವೇದಿಕೆಗೆ ತೆರಳಿ ಚುಕ್ಕಾಣಿ ಹಿಡಿದು ಕಾರ್ಯಕ್ರಮಕ್ಕೆ ರೂವಾರಿಯಾದೆ. ಒಂದೊಂದು ಮಗುವೂ ಹಾಡಿದ ನಂತರ ಅಥವಾ ನೃತ್ಯ ಮಾಡಿದ ನಂತರ, ಮಗುವನ್ನು ಹೊಗಳಿ, ನಾನು ಬಣ್ಣನೆ ಮಾಡಿದೆ. ಮುಂದಿನ ಮಗುವಿನ ಬಗ್ಗೆ ನಾನು ಏನು ಹೇಳುತ್ತೇನೆ ಎಂದು ಕುತೂಹಲ ಮೂಡಿಸಿದೆ. ಸಭೆಯಲ್ಲಿ,

> **ಶ್ರೀಮತಿ ಮನೋರಮ ಮಧ್ವರಾಜ್ ಅವರು ನಮ್ಮಲ್ಲಿಗೆ ಬಂದು ಕಾರ್ಯಕ್ರಮದಲ್ಲಿ ಭಾಗವಹಿಸಿ, ವೇದಿಕೆಯಿಂದ ನಾನು ನುಡಿದ ಕನ್ನಡವನ್ನು ಕೇಳಿ, ನೀವು ಇಂಜಿನಿಯರ್ ಆದರೂ ಎಷ್ಟು ಸೊಗಸಾಗಿ ಕನ್ನಡ ಮಾತನಾಡುತ್ತೀರಿ ಎಂದು ಅಚ್ಚರಿಪಟ್ಟರು.**



ವೇದಿಕೆಯಲ್ಲಿ ಶಿಸ್ತು ಸಂಯಮ ಬಂದು ಸಭೆಕಳೆಗಟ್ಟಿತು. ಬಹಳ ಮಂದಿ ಬಂದು ಕೈಕುಲುಕಿದರು. ತಿಂಗಳೆರಡರಲ್ಲಿ ನಡೆದ ಸಂಘದ ಚುನಾವಣೆಯಲ್ಲಿ ನನ್ನನ್ನು ಅವಿರೋಧವಾಗಿ ಕಾರ್ಯದರ್ಶಿಯನ್ನಾಗಿ ಆಯ್ಕೆ ಮಾಡಿದರು. ಇಂಡಿಯನ್ ಆಯಿಲ್ ಕಾರ್ಪೋರೇಷನ್‌ನಲ್ಲಿದ್ದ ರೈ ಅವರನ್ನು ಅಧ್ಯಕ್ಷರನ್ನಾಗಿ ಮಾಡಿದರು. ನನಗೂ ಅವರಿಗೂ ತಾಳಮೇಳ ಸರಿಯಾಗಿತ್ತು. ಮಂಗಳೂರಿನ ಸಾಲಿಯಾನ್ ಅನ್ನುವವರು ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರು. ಅವರ ಸಂಘಟನಾಶಕ್ತಿ, ಕೆಲಸ ಮಾಡುವ ತಾಕತ್ತು ಮತ್ತು ಹಿಡಿದ ಕೆಲಸವನ್ನು ಪಟ್ಟು ಬಿಡದೆ ಮಾಡುವ ಛಲ ಯಾರೇ ಆಗಲಿ ಮೆಚ್ಚಬೇಕು. ಐ.ಒ.ಸಿ.ಯ ಹಿರಿಯ ಅಧಿಕಾರಿಗಳಾಗಿದ್ದ ರೈ ಅವರ ನಾಯಕತ್ವದ ಗುಣ ಅಪಾರವಾದುದು. ಅವರ ಮನೋವೈಶಾಲ್ಯತೆ ಬಹಳ ದೊಡ್ಡದು. ಅಂತರಿಕ್ಷ ವಿಭಾಗದಲ್ಲಿದ್ದ ರಾಮಸ್ವಾಮಿಯವರು ಹಾಗೂ ರಿಲಯನ್ಸ್ ಕಂಪನಿಯಲ್ಲಿ ಟೆಕ್ಸ್‌ಟೈಲ್ ಇಂಜಿನಿಯರ್ ಆಗಿದ್ದ ವೆಂಕಟೇಶಮೂರ್ತಿ ಅವರ ಕನ್ನಡದ ಕಳಕಳಿ ತುಂಬ. ಗುಂಪುಗಳಿದ್ದರೂ ಕನ್ನಡದ ತೇರನ್ನು ಒಟ್ಟಾಗಿ ಎಳೆದೆವು. ಬಹಳ ದೊಡ್ಡ ದೊಡ್ಡ ಕಾರ್ಯಕ್ರಮಗಳನ್ನು ಮಾಡಿದೆವು.

ಆಗಿನ ಕಾಲದಲ್ಲಿ ಮಂತ್ರಿಗಳಾಗಿದ್ದ ಶ್ರೀಮತಿ ಮನೋರಮ ಮಧ್ವರಾಜ್ ಅವರು ನಮ್ಮಲ್ಲಿಗೆ ಬಂದು ಕಾರ್ಯಕ್ರಮದಲ್ಲಿ ಭಾಗವಹಿಸಿ, ವೇದಿಕೆಯಿಂದ ನಾನು ನುಡಿದ ಕನ್ನಡವನ್ನು ಕೇಳಿ, ನೀವು ಇಂಜಿನಿಯರ್ ಆದರೂ ಎಷ್ಟು ಸೊಗಸಾಗಿ ಕನ್ನಡ ಮಾತನಾಡುತ್ತೀರಿ ಎಂದು ಅಚ್ಚರಿಪಟ್ಟರು. ಕಾರ್ಯಕ್ರಮಕ್ಕೆ ಬೇಕಾಗುವ ವೆಚ್ಚಕ್ಕೆ ಕೊರತೆ ಇರಲಿಲ್ಲ. ಗುಜರಾತಿನ ವ್ಯಾಪಾರಿ ಮನೋಭಾವದ ಗಾಳಿ ಇದ್ದುದರಿಂದ ಹಣಕ್ಕಾಗಿ ಸೋವಿನರ್ ಮಾಡುವ ಸಂಸ್ಕೃತಿ ಇತ್ತು. ವರ್ಷಕ್ಕೊಮ್ಮೆ ಸೋವಿನರ್ ಮಾಡಿ ಇಡೀ ವರ್ಷಕ್ಕೆ ಬೇಕಾಗುವ ಹಣವನ್ನು ಮಾಡುತ್ತಿದ್ದವು. ಭಿನ್ನಾಭಿಪ್ರಾಯಗಳು ಇದ್ದರೂ ಸಹ ದ್ವೇಷ, ಅಸೂಯೆಗಳಿರಲಿಲ್ಲ. ಸರ್ಕಾರಿ ವಲಯದಲ್ಲಿ ನಾನು ಹೆಸರು ಮಾಡಿದ ತಾಣ ಅಹಮದಾಬಾದ್. ಇಡೀ ರಾಷ್ಟ್ರದಲ್ಲಿ ಒಂದು ಬಗೆಯ ಕುಶಲತೆಯ ನಿಪುಣಬೇಕೆಂದು ಭಾರತ ಸರ್ಕಾರ ನನ್ನೊಬ್ಬನನ್ನೇ ಬಯಸಿತು. ಕೇವಲ ಗುಣಾಧಾರಿತ ಆಯ್ಕೆ ಅದಾಗಿತ್ತು. ಗುಜರಾತಿನ ಜನ ಬಹಳ ವಿಶ್ವಾಸಿಗಳು. ನಾನು ಗುಜರಾತಿ ಭಾಷೆಯನ್ನು ಬಹಳ ಬೇಗ ಕಲಿತೆ. ಇಂದಿಗೂ ಭಾಷೆಯನ್ನು ನಾನು ಚೆನ್ನಾಗಿ ಮಾತನಾಡಬಲ್ಲೆ. ಗುಜರಾತಿನ ರಾಜಧಾನಿಯ ಕನ್ನಡ ಸಂಘ ನನಗೆ ಸಂಘಟನಾ ಚಾತುರ್ಯವನ್ನೂ ಕಲಿಸಿತು. ಅದಕ್ಕೆ ಗುರು ಶ್ರೀ ಸಾಲಿಯಾನ್ ಅವರು. ನಾಯಕತ್ವದ ಆದರ್ಶಗುಣಗಳಿಗೆ ನನಗೆ ರೈ ಅವರು ಮಾದರಿ ಆದರು. ಮುನ್ನುಗ್ಗಿ ಹೋರಾಡುವುದನ್ನು ಅವರು ಕಲಿಸಿದರು. ಪರಿಸ್ಥಿತಿಗಳ ಹದಗೆಟ್ಟಾಗ ಅದರ ನಿಯಂತ್ರಣ ಚಾತುರ್ಯವನ್ನು ಕಲಿಸಿದರು. ಈ ಮಹಾನುಭಾವರಿಗೆ ನಾನು ಋಣಿ. ಸಂಘ



**ಶಿವರಾಮ ಕಾರಂತರು ಬಂದರು. ನಾನು ಅವರನ್ನು ಕನ್ನಡದಲ್ಲಿ ಮಾತನಾಡಿಸಿದೆ. ಅವರ ಎಲ್ಲಾ ಕೃತಿಗಳನ್ನು ಓದಿದ್ದ ನಾನು ಅವರ ಅತೀವ ಅಭಿಮಾನಿಯಾಗಿದ್ದೆ.**

ನಡೆಸಿದ ದಿವಂಗತ ಪ್ರತಿಮಾಬೇದಿಯವರ ಒಡಿಯಾ ನೃತ್ಯ, ದರ್ಪಣ ಸಂಸ್ಥೆಯ ಮಲ್ಲಿಕಾ ಸಾರಾಭಾಯಿ ಅವರು ನಡೆಸಿದ ಪ್ರದರ್ಶನಗಳು, ನಾವು ಮಾಡಿದ ನಾಟಕಗಳು, ಸಾಹಿತ್ಯಿಕ ಚಟುವಟಿಕೆಗಳು ಇತ್ಯಾದಿ ಸಂಘಕ್ಕೆ ಮತ್ತು ವೈಯಕ್ತಿಕವಾಗಿ ನನಗೆ ಬಹಳ ಹೆಸರನ್ನೂ ತಂದಿತು. ಟೈಮ್ಸ್ ಆಫ್ ಇಂಡಿಯಾದ ಶ್ರೀ ಆನಂದ ಅವರ ಪ್ರೋತ್ಸಾಹ ಮತ್ತು ಸುದ್ದಿ ಮಾಧ್ಯಮಗಳ ಮೂಲಕ ಅವರು ನಮ್ಮ ಸಂಘದ ಹಿರಿಮೆಯನ್ನು ಕೊಂಡಾಡುವಂತಾಯಿತು. ಎಡಕಲ್ಲು ಗುಡ್ಡದ ಮೇಲೆ ಚಲನಚಿತ್ರವನ್ನು ನಾವು ಪ್ರದರ್ಶಿಸಿದಾಗ, ಗುಜರಾತಿ ಜನಗಳು ನೋಡಿ, ಕನ್ನಡ ಚಲನ ಚಿತ್ರರಂಗ ಹಿಂದಿ ಚಿತ್ರರಂಗಕ್ಕಿಂತ ಚೆನ್ನಾಗಿದೆ ಎಂದರು. ಒತ್ತಡಗಳಿಗೆ ಮಣಿಯದೆ, ಸಮಸ್ಯೆಗಳನ್ನು ನೇರವಾಗಿ ಎದುರಿಸುವ ಧೈರ್ಯವನ್ನು ನನಗೆ ತಂದುಕೊಟ್ಟಿದದು ಅಹಮದಾಬಾದಿನ ಕರ್ನಾಟಕ ಸಂಘ. ಇದರ ನೆನಪು ನನಗೆ ಎಂದಿಗೂ ಹಸಿರು.

### *ಮಹಾರಾಷ್ಟ್ರದ ಬಾರ್ಸಿಯಲ್ಲಿ ನಡೆದ ಮರಾಠಿ ಸಾಹಿತ್ಯ ಸಮ್ಮೇಳನದಲ್ಲಿ ಶಿವರಾಮ ಕಾರಂತರು*

ನನ್ನ ದೆಹಲಿಯ ವರ್ಗಾವಣೆ ಮುನ್ನ ನಾನು ಮಂಗಳೂರು, ಮೈಸೂರಿನಲ್ಲಿ ಕೆಲದಿನ ಕಳೆದು ಭಡ್ತಿಯ ಮೇಲೆ ಸೊಲ್ಲಾಪುರಕ್ಕೆ ವರ್ಗಾವಣೆ ಆಯಿತು. ಕೇವಲ ಐದು ತಿಂಗಳು ಮಾತ್ರ ನಾನು ಇಲ್ಲಿ ಕೆಲಸ ಮಾಡಿದೆ. ನಮ್ಮ ವಿಭಾಗದಲ್ಲಿ ನನ್ನ ಹೆಸರು ಶಿಸ್ತಿನ ಸಿಪಾಯಿ ಎಂದೂ Suspension Master ಎಂದೂ ಪ್ರಚಲಿತವಾಗಿತ್ತು. ಸೊಲ್ಲಾಪುರದಲ್ಲಿ ಯಾವ ಸಂಘ ಸಂಸ್ಥೆಗಳಿಗೂ ನಾನು ಹೋಗಲಿಲ್ಲ. ಆದರೆ ಹೆಜ್ಜೆ ಇಟ್ಟಲ್ಲೆಲ್ಲಾ ಕನ್ನಡದವರು–ಮಿಕ್ಕವರಲ್ಲಿ ಬಹುತೇಕ ಮಂದಿ ತೆಲುಗರು–ಅಲ್ಲಿಯ ಲೋಕಸಭೆಯ ಅಂದಿನ ಸದಸ್ಯರು ತೆಲುಗಿನ ಕುಂಚನ ಸಿದ್ದಪ್ಪನವರು, ಇದನ್ನು ನೋಡಿದಾಗ ಆಶ್ಚರ್ಯದ ಸಂಗತಿ ಎಂದರೆ ಸೊಲ್ಲಾಪುರ ಮಹಾರಾಷ್ಟ್ರಕ್ಕೆ ಹೇಗೆ ಸೇರಿತು ಎನ್ನುವುದು.

ನಾನು ಸೊಲ್ಲಾಪುರದಲ್ಲಿದ್ದಾಗಿನ ಎರಡು ಘಟನೆಗಳನ್ನು ಹೇಳಲೇಬೇಕು. ಒಂದು 1980ರಲ್ಲಿ ನಡೆದ ಮರಾಠಿ ಸಾಹಿತ್ಯ ಸಮ್ಮೇಳನ. ಸೊಲ್ಲಾಪುರಕ್ಕೆ ಸಮೀಪವಾದ ಬಾರ್ಸಿಯಲ್ಲಿ ನಡೆಯಿತು. ಬಾರ್ಸಿ ತೊಗರಿಬೇಳೆಗೆ ಬಹಳ ಪ್ರಸಿದ್ಧಿ. ಹಿಂದಿನ ಕಾಲದಲ್ಲಿ ತೊಗರಿಬೇಳೆ ಕೊಳ್ಳಬೇಕಾದರೆ ಬಾರ್ಸಿ ಬೇಳೆಯೋ ಅಥವಾ ಆಗ್ರಾ ಬೇಳೆಯೋ ಎಂದು ಕೇಳುತ್ತಿದ್ದರು. ಮಧ್ಯಪ್ರದೇಶದ ಕೇಸರಿದಾಲ್ ಬೇಡ ಎನ್ನುತ್ತಿದ್ದರು. ಭ್ರಷ್ಟಾಚಾರದ ಕೇಸರಿದಾಲ್ ಪ್ರಕರಣ ಎಲ್ಲರಿಗೂ ಗೊತ್ತು. ಬಾರ್ಸಿಯಲ್ಲಿ ನಡೆದ ಸಮ್ಮೇಳನಕ್ಕೆ ದೂರಸಂಪರ್ಕ ಸವಲತ್ತುಗಳನ್ನು ಸರ್ಕಾರದ ಕಡೆಯಿಂದ ಒದಗಿಸುವ ಜವಾಬ್ದಾರಿ ನನ್ನದಾಗಿತ್ತು. ಶಿವರಾಮ ಕಾರಂತರು ಮುಖ್ಯ ಅತಿಥಿ. ಜಸ್ಟೀಸ್ ಜಾಮದಾರ್ ಅವರು ಮತ್ತೊಬ್ಬರು ಅತಿಥಿಗಳು. ಈ ಇಬ್ಬರು ಮಾಡಿದ ಭಾಷಣಗಳು ಬಹಳ ಅದ್ಭುತವಾಗಿತ್ತು. ನಾವು ಏರ್ಪಾಡು ಮಾಡಿದ್ದ ಪ್ರೆಸ್ ರೂಮಿಗೆ ಶಿವರಾಮ ಕಾರಂತರು ಬಂದರು. ನಾನು ಅವರನ್ನು ಕನ್ನಡದಲ್ಲಿ ಮಾತನಾಡಿಸಿದೆ. ಅವರ ಎಲ್ಲಾ ಕೃತಿಗಳನ್ನು ಓದಿದ್ದ ನಾನು ಅವರ ಅತೀವ ಅಭಿಮಾನಿಯಾಗಿದ್ದೆ. ಅವರನ್ನು ನನಗೆ ಸ್ವತಃ ಭೇಟಿ ಮಾಡಿ ಕೈಕುಲುಕುವ ಅವಕಾಶ ಮರೆಯಲಾರದ ಘಟನೆ. ಮುಂದೆ ದೆಹಲಿಯಲ್ಲಿ ನಾನು ಕರ್ನಾಟಕ ಸಂಘದ ಕಾರ್ಯದರ್ಶಿಯಾಗಿದ್ದಾಗ, ನನ್ನ ಕಾರಿನಲ್ಲಿ ಅವರನ್ನು ಶ್ರೀರಾಮ್ ಸೆಂಟರಿಗೆ ಕರೆದೊಯ್ಯುವ

ಭಾಗ್ಯ ನನ್ನದಾಗಿತ್ತು. ಇನ್ನೊಂದು ಘಟನೆ ಎಂದರೆ ವ್ಯಕ್ತಿಗಳ ಧರ್ಮಶ್ರದ್ಧೆಯನ್ನು ಬಿಂಬಿಸುವ ಅನುಭವ. ನನಗೆ ಸೊಲ್ಲಾಪುರದಿಂದ ದೆಹಲಿಯ ದೂರ ಸಂಪರ್ಕ ಮಂತ್ರಾಲಯದ ಯೋಜನಾ ವಿಭಾಗಕ್ಕೆ ವರ್ಗವಾಯಿತು. ಬಹಳ ಉತ್ಸಾಹದಲ್ಲಿದ್ದೆ. ಆದರೆ ನನ್ನನ್ನು ಬಿಡುಗಡೆ ಮಾಡಲು ಮುಂಬೈ ಕಾರ್ಯಾಲಯವು ಸಿದ್ಧವಾಗಿರಲಿಲ್ಲ. ಅಂದಿನ ಜನರಲ್ ಮ್ಯಾನೇಜರ್ ವಿಲಿಯಮ್‌ವಾಜ್ಡ್ ಅವರು ನನ್ನ ಜಾಗಕ್ಕೆ ಇನ್ನೊಬ್ಬರು ಬರುವ ತನಕ ನನ್ನ ಬಿಡುಗಡೆ ಸಾಧ್ಯವಿಲ್ಲ ಎಂದು ಖಡಾಖಂಡಿತವಾಗಿ ನುಡಿದರು.

ಮಕ್ಕಳನ್ನು ಶಾಲೆಗೆ ಸೇರಿಸಬೇಕಾದರೆ ಐದು ಸಾವಿರ ರೂಪಾಯಿಗಳ ಡೊನೇಷನ್ ಕೊಡಬೇಕಾಗಿತ್ತು. ಶಾಲೆಗೆ ಸೇರಿಸಿದ ನಂತರ ನನ್ನ ಬಿಡುಗಡೆಯಾದರೆ ಹಣ ಮುಳುಗುತ್ತಿತ್ತು. ಈ ಇಬ್ಬಂದಿಯಲ್ಲಿ ನರಳುತ್ತಿದ್ದೆ. ದಿನವೂ ದೆಹಲಿಗೆ ಮಾತನಾಡಿ ನನ್ನ ಜಾಗಕ್ಕೆ ಬೇರೆ ಯಾರನ್ನಾದರೂ ಕಳುಹಿಸುತ್ತಿದ್ದಾರೆ ಎಂದು ವಿಚಾರಿಸುವುದು ಮತ್ತೆ ಮತ್ತೆ ನಕಾರಾತ್ಮಕ ಉತ್ತರ ಬರುವುದು–ಇವುಗಳಿಂದ ರೋಸಿ ಹೋಗಿದ್ದೆ. ಒತ್ತಡದಲ್ಲಿ ಕುಳಿತಿದ್ದ ನನ್ನನ್ನು ನೋಡಲು ಬಂದವರು ಕುಲಕರ್ಣಿ ಅವರು. ನಿವೃತ್ತ ಕಿರಿಯ ಅಧಿಕಾರಿಗಳೂ. ಯಾಕೆ ಚಿಂತಿಯಲ್ಲಿ ಇದ್ದಾಂಗ ಕಾಣ್ತದೆ ಎಂದರು. ನಾನು ಅವರಿಗೆ ನನ್ನ ಗೊಂದಲವನ್ನು ವಿವರಿಸಿದೆ. ಅಷ್ಟೇ ತಾನೆ ಅದಕ್ಕೆ ಸಮಾಧಾನ ಉಂಟೆಂದರು. ಇಂದು ಶುಕ್ರವಾರ ಎರಡು ದಿನ ತಾಳಿ ನಂತರ ಭಾನುವಾರ ಬೆಳಿಗ್ಗೆ ಹತ್ತುವರೆಗೆ ಜಿ.ಎಂ. ಸಾಹೇಬ್ರಿಗೆ ಫೋನ್ ಹಚ್ರಿ ಎಂದರು. ಅದು ಹೇಗೆ ರಜೆ ದಿನದಲ್ಲಿ ಅವರಿಗೆ ತೊಂದರೆ ಮಾಡುವುದು ಎಂದೆ. ಇಲ್ರಿ ನಾನು ಹೇಳ್ದಾಂಗ್ಹ ಮಾಡ್ರಿ ಅದು ನನ್ನ ಜವಾಬ್ದಾರಿ ಎಂದರು. ಧೈರ್ಯ ಮಾಡಿ ಭಾನುವಾರ ಕುಲಕರ್ಣಿಯವರು ಹೇಳಿದ ರೀತಿ ವಿಲಿಯಮ್ ವಾಜ್ಡ್ ಅವರಿಗೆ ಮಾತನಾಡಿ, ತಾವು ನನ್ನನ್ನು ಇಲ್ಲಿ ಬಿಡುಗಡೆ ಮಾಡಿ ಅಥವಾ ನನ್ನನ್ನು ಇಲ್ಲೇ ಉಳಿಸಿಕೊಳ್ಳಿ, ಮಧ್ಯಕಾಲದಲ್ಲಿ ನನ್ನನ್ನು ರಿಲೀಸ್ ಮಾಡಿದರೆ ಮಕ್ಕಳ ಓದಿಗೆ ತುಂಬಾ ತೊಂದರೆ ಆಗುತ್ತೆ ಮತ್ತು ನನ್ನ ಹಣ ಸಹ ಹೊಗುತ್ತೆ ಅಂದೆ. ಬಹಳ ಕೋಪದ ಮನುಷ್ಯ. ಆದರೆ ಅವರು ಗಂಭೀರದ ದನಿಯಿಂದ ನಿನಗೆ ನನ್ನ ಕೆಳಗೆ ಕೆಲಸ ಮಾಡಲು ಇಷ್ಟವಿಲ್ಲವೇ ಎಂದರು. ನಾನು ಧೃಢವಾದ ದನಿಯಲ್ಲಿ, ನಾನು ವಯಸ್ಸಿನಲ್ಲಿ ಚಿಕ್ಕವನು ಮಂತ್ರಾಲಯದ ಕೆಲಸ ಕಲಿಯಲು ಇದು ಒಳ್ಳೆಯ ಅವಕಾಶ. ದೆಹಲಿ ವೇದಿಕೆ ದೊಡ್ಡದು, ನನ್ನ ಅಭಿಪ್ರಾಯ ಕೇಳಿದರೆ ನಾನು ದೆಹಲಿಗೆ ಹೋಗಬಯಸುತ್ತೇನೆ ಎಂದೆ. ಅವರು ಸೊಲ್ಲಾಪುರದಲ್ಲಿ ನೀನು ಎಂಟು ಜಿಲ್ಲೆ ನಿಯಂತ್ರಿಸುವ ವಿಭಾಗೀಯ ಅಧಿಕಾರಿ, ಗೌರವ ಪ್ರತಿಷ್ಠೆ ಇಲ್ಲಿ ನಿನಗೆ ಸಿಗುತ್ತದೆ, ಅಲ್ಲಿ ನೀನು ಕಾಸಿಗೆ ಒಬ್ಬರು–ಕೊಸರಿಗೆ ಒಬ್ಬರು ಎನ್ನುವ ಗುಂಪಿಗೆ ಸೇರುತ್ತೀಯ ಅಂದರು. ನಾನು ನನ್ನ ಇಚ್ಚೇ ತಿಳಿಸಿದ್ದೆನೆ, ತೀರ್ಮಾನ ನಿಮ್ಮದು ಎಂದೆ. ಮೊದಲಿಂದಲೂ ಖಡಾಖಂಡಿತವಾಗಿ ಮಾತನಾಡುವ ಅಭ್ಯಾಸ ನನ್ನದು.

ಸೋಮವಾರ ಬೆಳಿಗ್ಗೆ ನನ್ನನ್ನು ಸೊಲ್ಲಾಪುರದ ಜವಾಬ್ದಾರಿಯಿಂದ ಬಿಡುಗಡೆ ಮಾಡಿ, ದೆಹಲಿ ಸೇರಲು ಅನುಮತಿ ನೀಡುವ ಡಬಲ್ ಎಕ್ಸ್‌ಪ್ರೆಸ್ ತಂತಿ ಬಂದಿತು. ಸಂತಸದಿಂದ ಕುಲಕರ್ಣಿ ಅವರ ಮನೆಗೆ ಹೋದೆ. ಖಾನಾವಳಿಯಾಗ ಇವತ್ತು ಊಟ ಬೇಡ್ರಿ, ನಮ್ಮ ಮನ್ಯಾಗ ಮಾಡ್ರಿ ಎಂದರು. ನಾಳೆ ಟ್ರೇನ್‌ಗೆ ಹೋಗುವ ವ್ಯವಸ್ಥೆ ಮಾಡ್ತೇನೆ ಎಂದರು. ಊಟ ಮಾಡುವಾಗ ನಾನು ಕುಲಕರ್ಣಿ ಅವರೇ ಈ ಭಾನುವಾರ ಬೆಳಿಗ್ಗೆ ಮಾತನಾಡುವ ಕರಾಮತ್ತು ಏನು? ಎಂದೆ. ಅವರು ನಕ್ಕು, ಅವ ಕ್ರಿಶ್ಚಿಯನ್ ಇದ್ದಾನೆ–ಭಾನುವಾರ ಚರ್ಚಿಗೆ ಹೋಗ್ತಾನೆ, ಮನೆಗೆ ಬಂದು ಯಾರು ಏನು ಕೇಳಿದರೂ ಕೊಡುತ್ತಾನೆ ಇದು ಧರ್ಮಾಳುವಾದ ಅವನ ಶ್ರದ್ಧೆ ಎಂದರು. ಕಠಿಣ ಮನಸ್ಸಿನ ಕೋಪಿಷ್ಟನ ಆಚರಣೆಗೆ ಬೆರಗಾದೆ ನಾನು ಸೊಲ್ಲಾಪುರವೆಂದರೆ ಕುಲಕರ್ಣಿ ಅವರನ್ನೂ ಮರೆಯುವಂತಿಲ್ಲ. ಕನ್ನಡದವರ ಬಗ್ಗೆ ಅವರಿಗೆ ಬಹಳ ಅಭಿಮಾನ ಮತ್ತು ಪ್ರೀತಿ. ಅವರ ಜೋಳದ ಹೊಲದಲ್ಲಿ ಶೀಥ್ನಿ ಪಾರ್ಟಿ ಮಾಡಿಸಿದ್ದರು. ನನೊಟ್ಟಿಗೆ ಪಂಢರಾಪುರಕ್ಕೆ ಮತ್ತು ತುಳಿಜ್ಞಾಪುರಕ್ಕೆ ಬಂದಿದ್ದರು. ಕೇವಲ ಐದು ತಿಂಗಳು ನಾನು ಕೆಲಸ ಮಾಡಿದರೂ ಮರಾಠಿ ಭಾಷೆಯನ್ನು ಕಲಿತೆ.

> ಇದ್ದಷ್ಟು ದಿನ ಚೆನ್ನಾಗಿ ನಡೆಯಿತು. ಎಲ್ಲ ಜಾತಿಯ ಜನಗಳಿದ್ದರು. ಸೌಹಾರ್ದತೆ ಇದ್ದಿತು. ಜಾತಿಯ ಹೆಸರಿನಲ್ಲಿ ಯಾರೂ ಬೇಧ ಮಾಡಲಿಲ್ಲ.

### ರಾಜಧಾನಿ ದೆಹಲಿಯ ವಾಸ ಪ್ರಾರಂಭ

ಮೇ, 1980ರಲ್ಲಿ ದೆಹಲಿ ಬಂದು ಸೇರಿದೆ. ಮಕ್ಕಳಿಬ್ಬರೂ ಮೈಸೂರಿನಲ್ಲಿ ಓದುತ್ತಿದ್ದರು. ಕನ್ನಡ ಶಾಲೆಗೆ ಸಮೀಪದ ಪ್ರಗತಿ ವಿಹಾರದಲ್ಲಿ ಸರ್ಕಾರಿ ಮನೆ ಎರಡು ದಿನಗಳಲ್ಲೇ ನನಗೆ ಸಿಕ್ಕಿತು. ನಾನು ದೂರಸಂಪರ್ಕ ಇಲಾಖೆಯ ಮಂತ್ರಾಲಯಕ್ಕೆ ಸೇರಿದ ದಿನವೇ ಡಾಕ್‌ತಾರ್ ಭವನದ ಕಾರಿಡಾರ್‌ನಲ್ಲಿ ಜಿ.ವಿ. ಮೋಹನ್‌ರು ಸಿಕ್ಕಿದರು. ನನ್ನನ್ನು ಕಂಡು ಅವರಿಗೆ ಬಹಳ ಸಂತಸವಾಯಿತು. ಅವರು ಅಂಚೆ ಇಲಾಖೆಯಲ್ಲಿ ನಿರ್ದೇಶಕರಾಗಿದ್ದರು. ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾಗಿದ್ದ ಶ್ರೀ ಜಿ.ವಿ.ಕೆ. ರಾವ್ ಅವರ ಪುತ್ರರು. ಎರಡು



ದಿನಗಳಲ್ಲಿ ಸರ್ಕಾರಿ ಮನೆ ದೊರೆತ ತಕ್ಷಣವೇ ಹೆಂಡತಿ ಮಕ್ಕಳನ್ನು ದೆಹಲಿಗೆ ವಾರದೊಳಗೆ ಕರೆಸಿಕೊಂಡೆ, ಲೋದಿರೋಡ್ ದಾಟಿಕೊಂಡು ಪಾರ್ಲಿಮೆಂಟ್ ರಸ್ತೆಗೆ ನನ್ನ ಕಾರ್ಯಾಲಯಕ್ಕೆ ಹೋಗುವಾಗ ಕಾಣುವ ದೆಹಲಿ ಕನ್ನಡ ಶಾಲೆ ನನ್ನನ್ನು ಆಕರ್ಷಿಸಿತು. ಮಕ್ಕಳಿಗೆ ಅಲ್ಲಿ ಭರ್ತಿ ಮಾಡಿಸಬೇಕು ಎಂದು ತೀರ್ಮಾನಿಸಿದೆ. ಈ ನಡುವೆ ದಿನವೂ ಊಟದ ವೇಳೆಯಲ್ಲಿ ಮೋಹನ್ ಅವರ ಕೊಠಡಿಯಲ್ಲಿ ಕುಳಿತು ಚಹ ಕುಡಿಯುವ ಅಭ್ಯಾಸವಾಯಿತು. ಕನ್ನಡ ಶಾಲೆಗೆ ಮಕ್ಕಳನ್ನು ಸೇರಿಸಲಿದ್ದೇನೆ ಎಂದೆ. ಅವರು ಹೌಹಾರಿದರು. ಖಂಡಿತಾ ಬೇಡ ಅಲ್ಲಿ ಬರೀ ರಾಜಕೀಯ ಮಾಡ್ತಾರೆ, ಶಾಲೆ ಚೆನ್ನಾಗಿಲ್ಲ ಎಂದರು. ಅವರ ಪಿ.ಎ.ಗೆ ಹೇಳಿ ಮಾರನೆ ದಿನ ಕೇಂದ್ರಿಯ ಶಾಲೆಗೆ ಸೇರಿಸುವ ಅರ್ಜಿ ತರಿಸಿದರು. ಮಕ್ಕಳಿಗೆ ಕನ್ನಡ ಶಾಲೆ ತಪ್ಪಿತು. ನಂತರ ದೆಹಲಿಯಲ್ಲಿ ತಂಗಿದ ಮೂವತ್ತು ವರ್ಷಗಳಲ್ಲಿ ಕನ್ನಡ ಶಾಲೆಯ ಆಗು ಹೋಗುಗಳನ್ನು ನೋಡಿದಾಗ ಜಿ.ವಿ. ಮೋಹನರ್‌ರವರ ಮಾತು ಸತ್ಯವೆನಿಸಿತು. ಜಿ.ವಿ. ಮೋಹನ್ ಅವರು ದೆಹಲಿ ಕರ್ನಾಟಕ ಸಂಘದ ಬಗ್ಗೆ ಅದೇ ಮಾತನ್ನೂ ಹೇಳಿದರು.

ನಾನಿದ್ದ ಪ್ರಗತಿ ವಿಹಾರ ವಸತಿಯಲ್ಲಿ ಬಹಳ ಮಂದಿ ಕನ್ನಡದವರಿದ್ದರು. ನಾನೇ ಒಂದು ಸುತ್ತೋಲೆ ಹೊರಡಿಸಿ ಎಲ್ಲರನ್ನೂ ಹುಲ್ಲುಗಾವಲಿನಲ್ಲಿ ಸೇರಿಸಿದೆ. ಪ್ರಗತಿ ವಿಹಾರ ಕನ್ನಡ ಬಳಗ ಪ್ರಾರಂಭವಾಯಿತು. ನಾನು ಅದರ ಕಾರ್ಯದರ್ಶಿಯಾದೆ. ಪ್ರತಿ ತಿಂಗಳ ಹುಣ್ಣಿಮೆಯ ದಿನ ಸಂಜೆ ನಾವೆಲ್ಲ ಒಟ್ಟುಗೂಡುತ್ತಿದ್ದವು. ಯಾರ ಯಾರ ಮದುವೆಯ ವಾರ್ಷಿಕೋತ್ಸವ ಆ ತಿಂಗಳಲ್ಲಿ ಬೀಳುತ್ತಿತ್ತೋ ಅವರುಗಳು ಒಟ್ಟುಗೂಡಿ ತಿಂಡಿತೀರ್ಥಗಳ ವ್ಯವಸ್ಥೆ ಮಾಡುತ್ತಿದ್ದರು. ಎರಡು ವರ್ಷಗಳ ಕಾಲ ಸಂಘ ಚೆನ್ನಾಗಿ ನಡೆಯಿತು. ನಂತರ ಸಣ್ಣಪುಟ್ಟ ಭಿನ್ನಾಭಿಪ್ರಾಯಗಳೂ ತಲೆದೂರಿ ಸಂಘ ಲುಪ್ತವಾಯಿತು. ಇದ್ದಷ್ಟು ದಿನ ಸಂಗೀತದ ಸಂಜೆ, ಪಿಕ್‌ನಿಕ್‌ಗಳು ಇತ್ಯಾದಿ ಕಾರ್ಯಕ್ರಮಗಳನ್ನು ಮಾಡಿದೆವು. ಆಗುವ ಖರ್ಚನ್ನು ಸರತಿಯ ಮೇಲೆ ಕುಟುಂಬಗಳು ಭರಿಸಿದ್ದವು. ಕೆಲವು ಕುಟುಂಬಗಳು, ತಮ್ಮ ಸರತಿ ಬಂದಾಗ ಹಿಂಜರಿದರು. ಮನಸ್ತಾಪವಾಯಿತು. ಸಂಘ ಮುಳುಗಿತು. ಆದರೆ ಇದ್ದಷ್ಟು ದಿನ ಚೆನ್ನಾಗಿ ನಡೆಯಿತು. ಎಲ್ಲ ಜಾತಿಯ ಜನಗಳಿದ್ದರು. ಸೌಹಾರ್ದತೆ ಇದ್ದಿತು. ಜಾತಿಯ ಹೆಸರಿನಲ್ಲಿ ಯಾರೂ ಬೇಧ ಮಾಡಲಿಲ್ಲ, ಕಹಿ ಮನಸ್ಸು ಸಹ ಬರಲಿಲ್ಲ. ಸಂತೋಷದಿಂದ ಕಳೆದ ಬೆಳದಿಂಗಳ ರಾತ್ರಿಗಳು ಕನ್ನಡದ ಕಂಪನ್ನು ಇಂದಿಗೂ ನೆನಪು ಮಾಡಿಸುತ್ತದೆ.

ಕನ್ನಡ ಚಲನಚಿತ್ರಗಳಿಗಾಗಿಯೇ ಇದ್ದ ಕೆ.ಎಸ್.ಜಿ. ಶೆಟ್ಟರ ಸಂಘ ಬಹಳ ಹೆಸರುವಾಸಿಯಾಗಿತ್ತು. ಅಲ್ಲಿ ರಾಜಕೀಯವಿರಲಿಲ್ಲ. ಸದಸ್ಯರಾಗದೇ ಸಿನಿಮಾ ನೋಡಿದೆವು. ಕರ್ನಾಟಕ ಸಂಘಕ್ಕೆ




ನಾಗರಾಜ ನನ್ನ ಕಾಲೇಜು ಸಮಯದ ಗೆಳೆಯ ಹಾಗೂ ಪ್ರೀತಿಪಾತ್ರನೂ ಆದವನು. ಕರ್ನಾಟಕ ಸಂಘದ ವಿಷಯದಲ್ಲಿ ಅವನೊಡನೆ ಸಾಕಷ್ಟು ಭಿನ್ನಾಭಿಪ್ರಾಯಗಳಿದ್ದರೂ ಸಹ, ಅವು ಎಂದು ನಮ್ಮೀರ್ವರ ಆತ್ಮೀಯತೆಗೆ ಧಕ್ಕೆ ತರಲಿಲ್ಲ.

ಹೋಗೋಣವೆಂದಾಗ ಜಿ.ವಿ. ಮೋಹನ್‌ರು ತಡೆದರು. ಹೀಗೊಮ್ಮೆ ಅಮೆರಿಕಾಯಾನಕ್ಕೆ ಹೋಗಿ, ದೆಹಲಿಯ ಮೂಲಕ ಮನೆಗೆ ಮರಳುತ್ತಿದ್ದ, ನನ್ನ ಗುರುಗಳಾದ, ಜಿ.ಎಚ್. ನಾಯಕರು ವಿಮಾನ ನಿಲ್ದಾಣದಿಂದ ಮಾತನಾಡಿ, ಮಾರನೆಯ ಬೆಳಿಗ್ಗೆ ತಮಗೆ ಬೆಂಗಳೂರಿನ ವಿಮಾನವಿದೆಯೆಂದರು. ವಿಮಾನ ನಿಲ್ದಾಣದಲ್ಲಿದ್ದ ನನ್ನ ಕಛೇರಿಗೆ ಮಾತನಾಡಿ, ಅವರನ್ನು ಮನೆಗೆ ಕರೆಯಿಸಿಕೊಂಡೆ. ವಿಶ್ರಾಂತಿ ಪಡೆದ ನಾಯಕರು, ಸಂಜೆ ಮಾತನಾಡುತ್ತಾ, ದೆಹಲಿಯಲ್ಲಿ ಕೆ.ಆರ್. ನಾಗರಾಜರು ಇದ್ದಾರೆ, ನಿಮಗೆ ಗೊತ್ತೆ ಎಂದರು. ನಾನು ಯಾರು ಮದ್ವ ಹಾಸ್ಟಲ್‌ನ ನಾಗರಾಜನೇ. ಇಲ್ಲಿ ಯಾಕೆ ಇದ್ದಾನೆ ಎಂದೆ. ಅದಕ್ಕೆ ನಾಯಕರು, ಅವರು ವಕೀಲಾಗಿದ್ದಾರೆ, ಸುಪ್ರೀಂಕೋರ್ಟ್‌ನಲ್ಲಿ ಕಾರ್ಯಪರಿಹರ ಮಾಡುತ್ತಿದ್ದಾರೆ, ನನ್ನ ಬಳಿ ಅವರು ದೂರವಾಣಿ ಸಂಖ್ಯೆ ಇದೆ ಎಂದರು. ತಕ್ಷಣ ನಾಗರಾಜನಿಗೆ ಮಾತನಾಡಿದೆ. ನಾಗರಾಜ ನನ್ನ ಕಾಲೇಜು ಸಮಯದ ಗೆಳೆಯ ಹಾಗೂ ಪ್ರೀತಿಪಾತ್ರನೂ ಆದವನು. ಕರ್ನಾಟಕ ಸಂಘದ ವಿಷಯದಲ್ಲಿ ಅವನೊಡನೆ ಸಾಕಷ್ಟು ಭಿನ್ನಾಭಿಪ್ರಾಯಗಳಿದ್ದರೂ ಸಹ, ಅವು ಎಂದು ನಮ್ಮೀರ್ವರ ಆತ್ಮೀಯತೆಗೆ ಧಕ್ಕೆ ತರಲಿಲ್ಲ. ಅವನ ಕೊನೆಯ ತನಕವೂ ಕೌಟುಂಬಿಕ ಸ್ನೇಹ-ಅನುಬಂಧಗಳಿದ್ದವು. ನಾಗರಾಜ ಅರ್ಧ ಗಂಟೆಯಲ್ಲಿ ಮನೆಗೆ ಬಂದ. ಜಿ.ಎಚ್. ನಾಯಕರು ಸಹ ಅವನಿಗೆ ಬಹಳ ಬೇಕಾದವರು. ಬಹಳ ಮಾತನಾಡಿದೆವು. ಒಟ್ಟಿಗೆ ಊಟ ಮಾಡಿದೆವು.

ಸಂಘದಲ್ಲಿ ಶ್ರೀಮತಿ ಸರೋಜಿನಿ ಮಹಿಷಿಯವರ ವಿರುದ್ಧ ನಾಗರಾಜನ ಗುಂಪು ಎದ್ದು ನಿಂತಿತ್ತು. ಆಗಾಗ ದೆಹಲಿಯ ಕನ್ನಡದ ಪತ್ರಿಕೆಯಲ್ಲಿ ಸಹ ಆ ವಿಚಾರ ಬರುತ್ತಿತ್ತು. ನಾಗರಾಜ ಬಲವಂತ ಮಾಡಿ ನನ್ನನ್ನು ದೆಹಲಿ ಕರ್ನಾಟಕ ಸಂಘಕ್ಕೆ ಸದಸ್ಯನನ್ನಾಗಿ ಮಾಡಿಸಿದ. ಆದರೂ ವೃತ್ತಿ ಸಹೋದ್ಯೋಗಿ ಜಿ.ವಿ. ಮೋಹನ್‌ರ ಮಾತನ್ನೂ ನಾನು ಮೀರಲಿಲ್ಲ. ಕರ್ನಾಟಕ ಸಂಘಕ್ಕೆ ನಾನು ಹೋಗಲಿಲ್ಲ.

### ದೆಹಲಿ ಕರ್ನಾಟಕ ಸಂಘಕ್ಕೆ ಕೆ.ಆರ್. ನಾಗರಾಜ ನನ್ನನ್ನು ಎಳೆದೊಯ್ದು

ಅಂದಿನ ವಿಶೇಷ ಸಾರ್ವಜನಿಕ ಸಭೆಗೆ ನನ್ನನ್ನು ಕರೆದುಕೊಂಡು ಹೋಗಿ ಸಭೆಯಲ್ಲಿ ಅವರ ಗುಂಪಿನ ಪರವಾಗಿ ಮಾತನಾಡುವಂತೆ ಮಾಡಿದ. ಗೂಂಡಾಗಳಿದ್ದಾರೆ ಎಂದು ಸಹ ತಿಳಿಸಿದ್ದ. ಅಂದು ನಾನು ಭಾವನಾತ್ಮಕವಾದ ಭಾಷಣ ಮಾಡಿ, ಕನ್ನಡ ಸಂಸ್ಕೃತಿ ಮತ್ತು ಸಂಘಗಳನ್ನೂ ಪಟ್ಟಭದ್ರ ಹಿತಾಸಕ್ತಿಗಳಿಗೆ ಕೊಡಬಾರದೆಂದು ಕಳಕಳಿಯ ಮನವಿ ಮಾಡಿದೆ. ಸಭೆಯಲ್ಲಿದ್ದ ದೆಹಲಿ ಹಿರಿಯ ಕನ್ನಡಿಗ ಸುಪ್ರೀಂ ಕೋರ್ಟಿನ ವಕೀಲ ಶ್ರೀ ಎಸ್.ಆರ್. ಕುಲಕರ್ಣಿಯವರು ನನ್ನಲ್ಲಿಗೆ ನಡೆದು ಬಂದು ಕೈ ಕುಲುಕಿ, "ಸರಸ್ವತಿ ನಿಮ್ಮ ನಾಲಿಗೆಯ ಮೇಲೆ ಕುಣಿತಾಳ್ರಿ" ಎಂದರು. ಅವರು ನಾಗರಾಜನ ವಿರುದ್ಧ ಗುಂಪಿನವರಾದರೂ ಸಹ ಗುಣಕ್ಕೆ ಮಾತ್ಸರ್ಯ ತೋರಿಸದ ಹೃದಯವಂತಿಕೆ ಪ್ರಕಟಿಸಿದರು. ಸಂಘದ ನನ್ನ ಒಡನಾಟ ಶುರುವಾಯಿತು. ವರ್ಷಂಪ್ರತಿ ವರ್ಷ ನಾಗರಾಜನೇ ಸಂಘಕ್ಕೆ ಆಯ್ಕೆಯಾಗಿ ಬರುತ್ತಿದ್ದ. ಜನರು ಟೀಕೆ ಮಾಡಲು ಪ್ರಾರಂಭಿಸಿದರು. ನಾಗರಾಜನಿಗೂ ಸಹ ಬೇರೆ ಯಾರಾದರನ್ನು ಬದಲಿಯನ್ನಾಗಿ ನಿಲ್ಲಿಸುವ ಯೋಚನೆ ಬಂದಿತು ಎಂದು ಕಾಣುತ್ತದೆ.

### ನಾಗರಾಜ ನನ್ನನ್ನು ದೆಹಲಿ ಕರ್ನಾಟಕ ಸಂಘದ ಕಾರ್ಯದರ್ಶಿಯನ್ನಾಗಿ ಮಾಡಿದ

ದೆಹಲಿಗೆ ನಾನು ಹೋದ ಕೆಲ ದಿನಗಳಲ್ಲಿ ಡಾ. ಕೆ.ಬಿ. ಪ್ರಭುಪ್ರಸಾದರ ಸ್ನೇಹಿತರಾಗಿದ್ದ ಶ್ರೀ ಎನ್.ಪಿ. ಭಟ್ಟರ ಪರಿಚಯವಾಗಿತ್ತು, ಭಟ್ಟರು ಭಾರತ ಸರ್ಕಾರದ ಆದಾಯ ತೆರಿಗೆ ವರಿಷ್ಠ ಅಧಿಕಾರಿಗಳು. ಭಟ್ಟರ ಮತ್ತು ನನ್ನ ನಡುವಿನ ಇನ್ನೊಂದು ಕೊಂಡಿಯೆಂದರೆ ಸಫ್ದರ್‌ಜಂಗ್ ಆಸ್ಪತ್ರೆಯಲ್ಲಿ ಮೆಡಿಕಲ್ ಸೂಪರಿಂಟೆಂಡೆಂಟ್ ಆಗಿದ್ದ ಡಾ. ಭಾರದ್ವಾಜರು. ಇವರ ಮನೆಗಳಲ್ಲಿ ಆಗಾಗ ಭೇಟಿಯಾಗುತ್ತಿದ್ದವು. ಡಾ. ಭಾರಧ್ವಾಜರು ಹೆಸರಾಂತ ಐ.ಎ.ಎಸ್. ಅಧಿಕಾರಿ ಭೂರೇಲಾಲ್‌ರ ಭಾವಮೈದ ಸಹ. ಇವರೆಲ್ಲರಿಗೂ ಆಧ್ಯಾತ್ಮಿಕ ಮತ್ತು ಪ್ರಾಚೀನ ಸಂಸ್ಕೃತಿಯ ಒಲವು ಇದ್ದುದರಿಂದ ನನಗೆ ಸಮೀಪವಾಗಿದ್ದರು. ನನ್ನ ಯು.ಪಿ.ಎಸ್.ಸಿ. ಸಂದರ್ಶನದಲ್ಲಿ ಅರ್ಧ ಗಂಟೆ ಚರ್ಚೆಯಾದದ್ದು ಭಗವದ್ಗೀತೆಯ ಮೇಲೆ ಆದ್ದರಿಂದ ನಾನು ಗೆದ್ದೆ ಎಂದಾಗ, ಭೂರೇಲಾಲ್‌ರು, ಗೋಪಿ ನಾನು ಸುಪ್ರೀಂಕೋರ್ಟಿನವರೆಗೆ ಹೋಗುತ್ತೇನೆ, ತಾಂತ್ರಿಕ ಪ್ರಶ್ನೆಗಳನ್ನು ನಿನಗೆ ಕೇಳದೆ, ಭಗವದ್ಗೀತೆಯ ಪ್ರಶ್ನೆ ಕೇಳಿ ಬೇರೆಯವರಿಗೆ ಅನ್ಯಾಯವಾಗಿದೆ, ನಿನ್ನನ್ನು ಕುರ್ಚಿಯಿಂದ ಇಳಿಸುತ್ತೇನೆ ಎಂದು ಹಾಸ್ಯ ಮಾಡುತ್ತಿದ್ದರು.

1990ರ ಪ್ರಾರಂಭಿಕ ದಿನಗಳಲ್ಲಿ ಮುನ್ಸೂಚನೆ ನೀಡದೆ ನಮ್ಮ ಮನೆಗೆ ನಾಗರಾಜ, ಭಟ್ಟರು ಮತ್ತಿಬ್ಬರು ಬಂದರು. ಭಟ್ಟರನ್ನು ಅಧ್ಯಕ್ಷ ಸ್ಥಾನಕ್ಕೆ ನಿಲ್ಲಿಸುತ್ತೇನೆ ನೀನು ಕಾರ್ಯದರ್ಶಿ ಸ್ಥಾನಕ್ಕೆ ಅಭ್ಯರ್ಥಿಯಾಗು ಎಂದು ಅರ್ಜಿಗೆ ಸಹಿ ಮಾಡುವಂತೆ ನನ್ನು ಬಲವಂತಪಡಿಸಿದರು. ನಾನು ಸಾಧ್ಯವಿಲ್ಲ, ನನ್ನ ಭಡ್ತಿ ಸಮೀಪದಲ್ಲಿದೆ ಸರ್ಕಾರದ ಕೆಲಸ ಒತ್ತಡ ಬಹಳ ಇದೆ ಎಂದೆಲ್ಲಾ ರಾಗತೆಗೆದೆ. ನನ್ನ ಸಹಿ ಬೀಳುವವರೆಗೆ ಅವರು ನಮ್ಮ ಮನೆ ಬಿಟ್ಟು ಕದಲಲಿಲ್ಲ. ನಾನು ಚುನಾವಣಾಪ್ರಚಾರ ಮಾಡಲಾರೆನೆಂದೆ. ಅವರು ನೀನು ಏನೂ ಮಾಡಬೇಡ ನಾವು ನಿನ್ನನ್ನು ಗೆಲ್ಲಿಸುತ್ತೇವೆ ಎಂದರು. ಅಂದು ರಾತ್ರಿ ನಾಗರಾಜ ಟೆಲಿಫೋನ್ ಮಾಡಿ ಭಟ್ಟರು ಡಮ್ಮಿ ಕ್ಯಾಂಡಿಡೇಟ್ ಎಂದಾಗ ಎದೆ ಧಸಕ್ಕೆಂದಿತು. ನನ್ನ ಮನಸ್ಸು ಒಪ್ಪಲಿಲ್ಲ. ಮಾರನೆಯ ಬೆಳಿಗ್ಗೆ ಭಟ್ಟರೊಡನೆ ಮಾತನಾಡಿದೆ. ನಂತರ ನಾಗರಾಜನೊಂದಿಗೆ ಮಾತನಾಡಿ ಅವನನ್ನೊಪ್ಪಿಸಿದೆ. ಸಂಘಕ್ಕೆ ಭಟ್ಟರ ಜೋಡಿಯಾಯಿತು. ಜೊತೆಗೆ ಬಹಳ ಬಲವಾದ ಕಾರ್ಯಕಾರಿ ಸಮಿತಿ ಸಹ ಸಿಕ್ಕಿತು. ಎಲ್ಲರೂ ಹೊಂದಿಕೊಂಡು ಕೆಲಸ ಮಾಡುವಂತಾಯಿತು. ಸಂಘಗಳಲ್ಲಿ ಕೆಲಸ ಮಾಡಿದ ಮತ್ತು ಸರ್ಕಾರದಲ್ಲಿ ಸಂಘಟನೆ ಮಾಡುವ ಅನುಭವ ನನಗೆ ಮತ್ತು ಭಟ್ಟರಿಗೆ ಬಹಳ ಇತ್ತು. ಭಟ್ಟರು ವೇದಿಕೆಯ ಮೇಲೆ ನಿಂತರೆ ನಿರರ್ಗಳವಾಗಿ ಕನ್ನಡ ಮಾತನಾಡುತ್ತಿದ್ದರು. ಅವರ ನಂತರ ಸರಿಯಾಗಿ ಕನ್ನಡವೇ ಬಾರದವರು ಅನ್ವಯಾರ್ಥದಲ್ಲಿ ಡಮ್ಮಿ ಆದವರು ಅಧ್ಯಕ್ಷರಾಗಿದ್ದರು. ಎಲ್ಲೂ ತಡವರಿಸದೇ ಪದಗಳಿಗೆ ತಡಕಾಡದೆ ಸೊಗಸಾಗಿ ಕನ್ನಡ ಮಾತನಾಡುವ ದೆಹಲಿ ಕರ್ನಾಟಕ ಸಂಘದ ಇನ್ನೊಬ್ಬರು ಅಧ್ಯಕ್ಷರೆಂದರೆ, ನನ್ನ ಅಭಿಪ್ರಾಯದಲ್ಲಿ ಡಾ. ಪುರುಷೋತ್ತಮ ಬಿಳಿಮಲೆಯವರು ಮಾತ್ರ.




ಸಂಘಗಳಲ್ಲಿ ಕೆಲಸ ಮಾಡಿದ ಮತ್ತು ಸರ್ಕಾರದಲ್ಲಿ ಸಂಘಟನೆ ಮಾಡುವ ಅನುಭವ ನನಗೆ ಮತ್ತು ಭಟ್ಟರಿಗೆ ಬಹಳ ಇತ್ತು.

ಸಂಘದ ಕೊಠಡಿಗಳಿಗೆ (ವಸತಿ) ಬರುವ ಬಾಡಿಗೆ ಹಣ ಸೋರಿ ಹೋಗುತ್ತಿತ್ತು. ತೆಲುಗಿನವರು ಒಬ್ಬರು ಮ್ಯಾನೇಜರ್ ಆಗಿದ್ದರು. ಅನಿರೀಕ್ಷಿತ ಸಮಯಗಳಲ್ಲಿ ಸಂಘಕ್ಕೆ ಭೇಟಿ ನೀಡಿ ಅವರು ಮಾಡುತ್ತಿದ್ದ ಅವ್ಯವಹಾರಗಳನ್ನು ನಿಲ್ಲಿಸಿದೆ. ಮುಲಾಜಿಲ್ಲದೆ ಅವರನ್ನು ಕೆಲಸದಿಂದ ಕಿತ್ತುಹಾಕಿದೆ. ಇಲ್ಲಿ ನಾನು ಕರ್ನಲ್ ಚೆಂಗಪ್ಪನವರನ್ನು ಸ್ಮರಿಸಬೇಕು. ಅವರ ಇಬ್ಬರು ಮಕ್ಕಳೂ ವೈದ್ಯರು. ಹತ್ತಿರದ ಸೋಮ್‌ವಿಹಾರದಲ್ಲಿ ಸ್ವಂತ ಫ್ಲಾಟ್‌ನಲ್ಲಿ ವಾಸವಾಗಿದ್ದರು. ಅವರನ್ನು ಮ್ಯಾನೇಜರ್ ಆಗಿ ಎಂದು ಅಂಗಲಾಚಿದೆ. ನಾನು ಬೆಳಿಗ್ಗೆ ಹತ್ತರಿಂದ ಸಂಜೆ ಐದರವರೆಗೆ ಕುಳಿತುಕೊಳ್ಳಲಾರೆ ಎಂದರು. ನೀವು ಬೇಕಾದಾಗ ಬರಬಹುದು, ಬೇಕಾದಾಗ ಹೋಗಬಹುದು ಆದರೆ ಸಂಘದ ಅವ್ಯವಹಾರಗಳು ನಿಲ್ಲುವಂತೆ ಮಾಡಬೇಕು ಎಂದರೆ ಸರಿ ಎಂದರು. ತಿಂಗಳೆರಡರಲ್ಲಿ ಶಿಸ್ತು ಬಂದಿತು. ಸಂಘದ ಆದಾಯ ಏರಿತು. ಅನಾವಶ್ಯಕ ಖರ್ಚುಗಳು ಕಡಿಮೆಯಾದವು. ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರು ತಾವು ಸಮಿತಿಯ ಸಭೆಗೆ ಬರುತ್ತಿದ್ದಾಗ ಕೇಳುತ್ತಿದ್ದ ಟಾಕ್ಸಿ ಬಾಡಿಗೆ ನಿಲ್ಲಿಸಿದೆ. ನಾನಾಗಲಿ ಭಟ್ಟರಾಗಲಿ ಎಂದೂ ಅಂತಹ ಖರ್ಚುಗಳನ್ನು ಮಾಡಲಿಲ್ಲ. ಎನ್.ಪಿ. ಭಟ್ಟರು, ಸಭೆಗೆ ಬಂದು ವಿಳಂಬವಾದರೂ ಸಹ ಬಸ್ಸಿನಲ್ಲಿ ದೇವ್‌ನಗರದ ತಮ್ಮ ಮನೆಗೆ ಹೋಗುತ್ತಿದ್ದರು.

ನಮ್ಮ ಕಾರ್ಯದ ಅವಧಿ ಮುಗಿದಾಗ ಇದ್ದ ಸಾಲಗಳನ್ನು ತೀರಿಸಿ 16 ಲಕ್ಷರೂಗಳನ್ನು ಠೇವಣಿ ಇರಿಸಿದೆವು. ಪ್ರಾರಂಭದ ದಿನಗಳಲ್ಲಿ ಆಶು ಲಿಪಿಕ ಒಬ್ಬನು ನಮ್ಮ ಮನೆಗೆ ಬಂದು, ನಾನು ಸಂಘದ ಕೆಲಸ ಮಾಡಿದ್ದೇನೆ, ಈಗಲೂ ಮಾಡಬಯಸುತ್ತೇನೆ, ನಿಮ್ಮ ವೈಯಕ್ತಿಕ ಕೆಲಸಗಳಿದ್ದರೂ ಮಾಡುತ್ತೇನೆ, ಕೇಳಿದ ಮೊತ್ತಕ್ಕೆ ಬಿಲ್ ಸಹಕೊಡುತ್ತೇನೆ, ಅದು ಲಾಗಾಯ್ತಿನಿಂದ ಬಂದ ಪದ್ಧತಿ ಎಂದು ತನ್ನನ್ನು ಉಪಯೋಗಿಸಿಕೊಳ್ಳಬಹುದೆಂದ. ನಾನು ವಿನಯಪೂರ್ವಕವಾಗಿ ನಿರಾಕರಿಸಿದೆ. ಸಂಘಕ್ಕೆ ಬೇಕಾಗುವ ಸಣ್ಣಪುಟ್ಟ ಕೆಲಸವನ್ನು ನನ್ನ ಕಾರ್ಯಾಲಯದಲ್ಲೇ ಮಾಡಿಸುತ್ತಿದ್ದೆ. ಇನ್ನು ಕೆಲವು ವಿಷಯಗಳಲ್ಲಿ ಟೆಂಡರ್ ಕರೆಯುವ ಕೆಲಸವನ್ನು ಮೊದಲಿದ್ದ ಇಬ್ಬರು ವಿರೋಧಿಸಿದರು. ನಮ್ಮ ಸಮಿತಿಯಲ್ಲಿ ಸರ್ಕಾರದಲ್ಲಿ ಕೆಲಸ ಮಾಡುವ ಅನೇಕ ಅಧಿಕಾರಿಗಳಿದ್ದರು. ಅವರು ನಮ್ಮ ಪರವಾಗಿ ನಿಂತರು. ಸಭಾಂಗಣ ನಿರ್ಮಾಣ ಸಮಿತಿಯಲ್ಲಿ ನಮ್ಮ ಮಂತ್ರಾಲಯದ ಹಿರಿಯ ಸಹೋದ್ಯೋಗಿ ಶ್ರೀ ಎನ್.ಎಸ್. ಚಕ್ರವರ್ತಿಯವರು ಈ ಕಟ್ಟಡವನ್ನು ಒಡೆದರೆ ಮಾತ್ರ ಸಭಾಂಗಣ ಸಾಧ್ಯವೆಂದರು. ನಾಗರಾಜ –ಇಂತಹ ಋಣಾತ್ಮಕ ಇಂಜಿನಿಯರ್‌ಗಳು ನಮಗೆ ಬೇಡ ಎಂದ. ಶ್ರೀ ಚಕ್ರವರ್ತಿಯವರು ಬಹಳ ಮೇಧಾವಿ ಮತ್ತು ಹೆಸರಾಂತ ಸಿವಿಲ್ ಇಂಜಿನಿಯರ್. ಇಂದಿಗೂ ಭಾರತ ದೇಶದಲ್ಲಿ ಅವರಿಗೆ ಬಹಳ ದೊಡ್ಡ ಹೆಸರಿದೆ. ನಾಗರಾಜನಿಗೆ ಇಂಜಿನಿಯರಿಂಗ್ ಗೊತ್ತಿರಲಿಲ್ಲ. ಆಮೇಲೆ ಗೊತ್ತಾಗಿರಬೇಕು. ಚಕ್ರವರ್ತಿಗಳು ಯಾರೆಂದು. ಕೆಲವರು ಕಲೆಗಾರರು ನಮ್ಮಲ್ಲಿ ಪ್ರದರ್ಶನಕ್ಕಾಗಿ ತಂಗಿ ನಾವು ತೀರ್ಮಾನಿಸಿದ ದಿನಗಳಿಂದ ಹೆಚ್ಚಾಗಿ ತಂಗಿ ಬಾಡಿಗೆ ನೀಡದಿದ್ದಾಗ ನಾಗರಾಜ ಅವರ

ಪರವಹಿಸಿದ. ಬಡವರೆಂದು ಹೇಳಿದ. ನಾನು ಬಡವರಾದರೆ ಹಣ ಕೊಡುವುದು ಬೇಡ, ಕೊಡಬೇಕಾದ ಕೊಠಡಿಯ ಬಾಡಿಗೆ ಹಣವನ್ನು ನಾವಿಬ್ಬರೂ ಅರ್ಧ ಅರ್ಧ ಹಂಚಿಕೊಂಡು ಕಟ್ಟುವ ಎಂದೆ. ನಮ್ಮಿಬ್ಬರ ಭಿನ್ನಾಭಿಪ್ರಾಯಗಳು ಶುರುವಾಯಿತು. ಚಿಕ್ಕ ಕ್ಯಾಂಟೀನ್ ನಡೆಸುತ್ತಿದ್ದ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರು ನಮ್ಮ ಹಳ್ಳಿಯಲ್ಲಿ ಗುರುಗಳ ಪೂಜೆ ಇದೆ ಸಂಘದಿಂದ ಹಣ ಕೊಡಿಸಿ ಎಂದರು. ಸಂಘಕ್ಕೂ ನಿಮ್ಮೂರಿನ ಪೂಜೆಗೂ ಯಾವ ಸಂಬಂಧ ಎಂದು ಕೇಳಿದೆ. ನನ್ನ ಎಲ್ಲ ತೀರ್ಮಾನಗಳಲ್ಲಿ ನನಗೆ ಪೂರ್ಣವಾಗಿ ಬೆಂಬಲ ನೀಡಿದವರು ಶ್ರೀ ಎನ್.ಪಿ. ಭಟ್ಟರು, ಖಜಾಂಚಿಗಳಾಗಿದ್ದ ಫಡ್ಕೆ ಅವರು ಮತ್ತು ಸಮಿತಿಯ ಸದಸ್ಯರು.

ದೆಹಲಿಯ ಕನ್ನಡ ಪತ್ರಿಕೆ ಸಂಘದ ಬಗ್ಗೆ ಅಪಪ್ರಚಾರ ಮಾಡುತ್ತಿತ್ತು. ಅದನ್ನು ತಡೆಯುವುದು ಹೇಗೆಂದು ಸಂಘದ ಸಮಿತಿ ಚಿಂತಿಸಿತು. ನಾನು ಆ ಪತ್ರಿಕೆಯನ್ನು ನಾವು ವಿರೋಧಿಸಬೇಕಾಗಿಲ್ಲ, ನಾವು ಮಾಡುವ ಒಳ್ಳೆಯ ಕೆಲಸಗಳನ್ನು ನಮ್ಮ ಸದಸ್ಯರಿಗೆ ತಿಳಿಯಹೇಳೋಣ ಎಂದಾಗ ಎನ್.ಪಿ. ಭಟ್ಟರು ಸಂಘಕ್ಕೆ ಒಂದು ಮುಖವಾಣೀ ಬೇಕು ನಮ್ಮದೇ ಪತ್ರಿಕೆ ಬೇಕು ಎಂದರು.

### *ಅಕ್ಟೋಬರ್ 1990ರಲ್ಲಿ ಹುಟ್ಟಿತು ಸಂಘದ ಮುಖವಾಣಿ "ಅಭಿಮತ"*

ಪತ್ರಿಕೆ ತ್ರೈಮಾಸಿಕವಾಗಬೇಕಾ ಇಲ್ಲ ಮಾಸಪತ್ರಿಕೆಯಾಗ ಬೇಕಾ ಎನ್ನುವುದರ ಚರ್ಚೆ ನಡೆಯಿತು. ಅಭಿಮತ ಎನ್ನುವ ಹೆಸರನ್ನು ಭಟ್ಟರು ಸೂಚಿಸಿದರು. ಡಾ. ವೆಂಕಟಾಚಲ ಹೆಗಡೆಯವರನ್ನು ಸಂಪಾದಕರನ್ನಾಗಿ ಒಮ್ಮತದಿಂದ ಆರಿಸಲಾಯಿತು.

ರಂಗಸ್ವಾಮಯ್ಯನವರು, ಸರ್ಕಾರದ ಕೃಷಿ ವಿಭಾಗದ ಪತ್ರಿಕಾ ಪ್ರಸಾರ ಅಂಗದಲ್ಲಿ ಕೆಲಸ ಮಾಡುತ್ತಿದ್ದವರು ದಿನವೂ ಬಂದು ಅಭಿಮತಕ್ಕಾಗಿ ಕೆಲಸ ಮಾಡಿದರು. ಪ್ರಧಾನ ಮಂತ್ರಿಗಳಿಗೆ ಪ್ರಧಾನ ಸೂಚನಾ ಅಧಿಕಾರಿಯಾಗಿ ಜವಾಬ್ದಾರಿ ನಿರ್ವಹಿಸಿದ ಶ್ರೀ ನರೇಂದ್ರ ಅವರ ಪತ್ನಿ ಶ್ರೀಮತಿ ಪ್ರೇಮಲತಾ ಅವರು ಪತ್ರಿಕೆಗಾಗಿ ಕೆಲಸ ಮಾಡಿದರು. ಮೊದಲ ಮೂರು ತಿಂಗಳು ಸುಗಮವಾಗಿ ನಡೆಯಿತು. ಕರೋಲ್‌ಬಾಗಿನ ಮುದ್ರಣಾಲಯದ ಖರ್ಚಿನ ಬಿಲ್‌ಗಳು ಬಹಳವೆನಿಸಿತು. ಸಂಘದಲ್ಲಿ ಹಣವಿರಲಿಲ್ಲ. ನನ್ನ ಮನೆಯಲ್ಲಿ ಗಣಕ ಯಂತ್ರವಿತ್ತು. ಶಬ್ದರತ್ನ ಎನ್ನುವ ಸಾಫ್ಟ್‌ವೇರ್ ಕಂಪನಿಯ ಮಾಲೀಕರು ಶ್ರೀ ಮುತ್ತು ಕೃಷ್ಣನ್ ಅನ್ನುವವವರು ನನ್ನ ಸ್ನೇಹಿತರು. ಅವರು ತಯಾರು ಮಾಡಿದ ಸಾಫ್ಟ್‌ವೇರ್ ಉಚಿತವಾಗಿ ಪಡೆದೆ. ಆಗಿನ ಕಾಲದಲ್ಲಿ ಅದಕ್ಕೆ 10,000/– ರೂಪಾಯಿಗಳನ್ನು ತೆರಬೇಕಾಗಿತ್ತು.

> **ಕೆಲವೊಮ್ಮೆ ಮುದ್ರಣಕ್ಕೆ ತಪ್ಪುಗಳೊಂದಿಗೆ ಹೋಗಿ ಪ್ರಕಟಣೆಗೊಂಡಾಗ ಅಭಾಸವಾಗುತ್ತಿತ್ತು.**

ಸಾಫ್ಟ್‌ವೇರ್‌ನ್ನು ನಮ್ಮ ಮನೆಯ ಗಣಕಯಂತ್ರಕ್ಕೆ ಜೋಡಿಸಿ ಕೆಲಸ ಪ್ರಾರಂಭ ಮಾಡಿದೆವು. ಕನ್ನಡದ ಅಚ್ಚೊತ್ತನ್ನು ಬಲ್ಲ ಶ್ರೀಮತಿ ರಮಾ ಹೆಗ್ಗಡೆ ಅವರು ನಮಗೆ ಸಹಕಾರ ನೀಡಿದರು. ಅವರಿಗೆ ಮೂರು–ನಾಲ್ಕು ವರ್ಷದ ಮಗಳು. ಅಮ್ಮನೊಡನಿರಲು ಗಲಾಟೆ. ಅಮ್ಮನಿಗೆ ಕೆಲಸ ಮಾಡಲು ಬಿಡುತ್ತಿರಲಿಲ್ಲ. ನಾನಾಗಲಿ ನನ್ನ ಮಡದಿಯಾಗಲಿ ಮಗುವನ್ನು ಹೊರಗೆ ಕರೆದೊಯ್ದು, ರಮಾ ಅವರಿಗೆ ಕೆಲಸಕ್ಕೆ ಅನುವು ಮಾಡಿಕೊಡುತ್ತಿದ್ದೆವು. ಕನ್ನಡದ ಗಣಕಯಂತ್ರದ ಚಾಲನೆ ರಮಾ ಅವರಿಗೆ ಹೊಸದು. ವಿಪರೀತ ತಪ್ಪುಗಳನ್ನು ಮಾಡುತ್ತಿದ್ದರು. ಜೊತೆಯಲ್ಲಿ ಕುಳಿತು ತಿದ್ದುತ್ತಿದ್ದೆವು. ತಿದ್ದಿದ ನಂತರ ಅದನ್ನು ಸೇವ್ ಮಾಡಿ ಉಳಿಸದೆ ತೊಂದರೆಯಾಗಿ ಮತ್ತೆ ಮತ್ತೆ ಮಾಡಿದ ಕೆಲಸವನ್ನೇ ಮಾಡುತ್ತಿದ್ದರು. ಕೆಲವೊಮ್ಮೆ ಮುದ್ರಣಕ್ಕೆ ತಪ್ಪುಗಳೊಂದಿಗೆ ಹೋಗಿ ಪ್ರಕಟಣೆಗೊಂಡಾಗ ಅಭಾಸವಾಗುತ್ತಿತ್ತು. ಜನ ಬೈದರು. ಪ್ರಭಾಕರ ರಾಯರು ಬರೆದ ಖಾರದ ಪತ್ರ–ಕನ್ನಡವನ್ನು ಕೊಲ್ಲಬೇಡಿ ಎನ್ನುವ ತೀಕ್ಷ್ಣ ನುಡಿಗಳು ನನಗೆ ಮರೆಯಲಾರದ ಬೇಸರ ತಂದಿತು. ಹೊಸ ಗಣಕಯಂತ್ರವನ್ನು ಸಂಘಕ್ಕೆ ತರಲು ಹಣವಿರಲಿಲ್ಲ. ಆಗ ನನ್ನ ಸಹಾಯಕ್ಕೆ ನಿಂತವರು ನನ್ನ ಅಣ್ಣ ಹಾಗೂ ಬೆಂಗಳೂರಿನ ಖ್ಯಾತ ವಕೀಲ ಸಿ.ವಿ. ನಾಗೇಶ್. ಅವರ ಕಕ್ಷೀದಾರ ಅಂದಿನ ಸಂಸ್ಕೃತಿ ಮತ್ತು ಕನ್ನಡ ಇಲಾಖೆಯ ಮಂತ್ರಿ ದಿವಂಗತ ರಮೇಶ್ ಅವರು. ಅವರ ಭೇಟಿಗಾಗಿ ನನಗೆ ಸಮಯ ದೊರಕಿಸಿಕೊಟ್ಟ. ನಮ್ಮ ಹಿಂದಿನ ಸಮಿತಿಯವರು ಹಾಗೂ ನಮ್ಮ ಅವಧಿ ಮುಗಿದ ನಂತರದ ಸಮಿತಿಯವರು ಸಂಘದ ಖರ್ಚಿನಲ್ಲಿ ಬೆಂಗಳೂರಿಗೆ ಹೋಗಿ ಬರುತ್ತಿದ್ದರು. ಕೆಲವೊಮ್ಮೆ





> **ವಸಂತ ಶೆಟ್ಟರಿಗೂ ನನಗೂ ತಾತ್ವಿಕವಾಗಿ ಒಂದೆರಡು ಬಾರಿ ಭಿನ್ನಾಭಿಪ್ರಾಯಗಳು ಮೂಡಿ ಬಂದರೂ ಸಹ ನಮ್ಮಿಬ್ಬರ ಸ್ನೇಹ ಗಟ್ಟಿಯಾಗಿಯೇ ಉಳಿಯಿತು.**

ಅವರ ವಿಮಾನ ಪ್ರಯಾಣದ ಖರ್ಚನ್ನು ಸಂಘ ಭರಿಸಿತು. ನಮ್ಮ ತಂಡವಿದ್ದಾಗ ಹಾಗೂ ಮುಂದೆ ಸಂಘದ ಅಧ್ಯಕ್ಷನಾದಾಗ ಅಂತಹ ಯಾವುದೇ ಖರ್ಚುಗಳನ್ನು ಮಾಡಲು ಬಿಡಲಿಲ್ಲ.

ನಮ್ಮ ಅಣ್ಣನ ವಶೀಲಿಯಿಂದ ಎರಡು ವಾರಗಳಲ್ಲಿ ಕರ್ನಾಟಕ ಸರ್ಕಾರ ಸಂಘದ ಗಣಕಯಂತ್ರಕ್ಕೆ ಸಹಾಯ ಮಾಡಿತು. ರಮೇಶ್ ಅವರು ನನ್ನನ್ನು ಪ್ರೀತಿಯಿಂದ ಬರಮಾಡಿಕೊಂಡು ಎಂ.ಟಿ.ಆರ್.ನ ರವೆದೋಸೆ ತಿನ್ನಿಸಿ ಹಣದ ಬಿಡುಗಡೆ ಪತ್ರವನ್ನು ನನ್ನ ಕೈಗೆ ಕೊಟ್ಟರು. ಅಂದು ಭಾರತೀಯ ವಾಯುಸೇನೆಯಲ್ಲಿ ವಿಂಗ್ ಕಮಾಂಡರ್ ಆಗಿ ಕಾರ್ಯ ನಿರ್ವಹಿಸುತ್ತದ್ದ ಶ್ರೀ ರಾಮನಾಥ ಅವರ ನೇತೃತ್ವದಲ್ಲಿ ಟೆಂಡರ್ ಕಮಿಟಿ ಮಾಡಿ ಸಂಘಕ್ಕೆ ಒಳ್ಳೆಯ ಗಣಕಯಂತ್ರ ಹಾಗೂ ಉಚಿತ ಸಾಫ್ಟ್‌ವೇರ್ ತಂದೆವು. ರಮಾ ಹೆಗ್ಗಡೆ ಅಚ್ಚೊತ್ತಿನಲ್ಲಿ ಪಳಗಿದರು. ಅಭಿಮತದ ಪ್ರಕಟಣೆ ಗಟ್ಟಿಯಾದ ತಳಹದಿ ಪಡೆಯಿತು. ನಾಗರಾಜ ಸಹ ನನ್ನನ್ನು ಹೊಗಳಿದ. ನನ್ನ ಮತ್ತು ನಾಗರಾಜನ ನಡುವೆ ಸಂಘದ ವಿಷಯದಲ್ಲಿ ಭಿನ್ನಾಭಿಪ್ರಾಯವಿದ್ದರೂ, ವೈಯಕ್ತಿಕವಾಗಿ ಹಳೆಯ ಸ್ನೇಹಕ್ಕೆ ಎಂದೂ ಕುಂದು ಬರಲಿಲ್ಲ. ಸಂಘದಲ್ಲಿ ಅದುವರೆಗೂ ನಡೆಯದಿದ್ದ ಕಾರ್ಯಕ್ರಮಗಳು ನಡೆದವು. ಮಧ್ಯಕಾಲೀನ ಕನ್ನಡ ಸಾಹಿತ್ಯದ ಬಗ್ಗೆ ಐದು ಜ್ಞಾನಪೀಠ ಪ್ರಶಸ್ತಿ ವಿಜೇತರನ್ನೂ ಕರೆತಂದು ಸಂಗೋಷ್ಠಿ ಮಾಡಿದೆವು. ಸಂಗೀತದ ದಿಗ್ಗಜರಾದ ಕುಮಾರಗಂಧರ್ವ, ವೀಣೆ ದೊರೆಸ್ವಾಮಿ ಅಯ್ಯಂಗಾರ್, ಗಂಗೂಬಾಯಿ ಹಾನಗಲ್ ಅವರುಗಳು ಸಂಘಕ್ಕೆ ಬಂದರು. ಸೋವಿನರ್ ಮಾಡಿ ಸಂಘಕ್ಕೆ ಹಣ ತಂದೆವು. ಇವೆಲ್ಲದರ ಶ್ರೇಯ ಶ್ರೀ ಎನ್.ಪಿ. ಭಟ್ಟರಿಗೆ ಸೇರಬೇಕು. ಅವರಂತಹ ನಿಃಸ್ವಾರ್ಥ ಧೀಮಂತ ಕನ್ನಡಿಗರನ್ನು ನಾನು ಯಾವ ಕನ್ನಡದ ಸಂಘ ಸಂಸ್ಥೆಗಳಲ್ಲಿ ಕಂಡಿಲ್ಲ. ಅವರ ವ್ಯಕ್ತಿತ್ವ ಬಹಳ ವಿಶೇಷವಾದದ್ದು. ತಾವು ಮಾಡಿದ ಕಠಿಣ ಶ್ರಮದ ಹೆಸರನ್ನು ಬೇರೆಯವರಿಗೆ ತಾನೇ ಒಪ್ಪಿಸಿ ಎಲ್ಲರ ಪ್ರೀತಿ ಪಡೆಯುತ್ತಿದ್ದರು. ಇಂತಹ ಶ್ರೀಮಂತ ಸಂಸ್ಕೃತಿಯ ವ್ಯಕ್ತಿಯನ್ನು "ಜೋಕರ್" ಎಂದು ಕರೆದು ಅವಮಾನಿಸಿದ ನಾಗರಾಜನನ್ನು ಈ ವಿಷಯದಲ್ಲಿ ಎಂದೂ ಕ್ಷಮಿಸಲಾರೆ.

ಬೆಂಗಳೂರಿನ ದೂರದರ್ಶನಕ್ಕಾಗಿ ದಿವಂಗತ ಸಾಹಿತಿ, ಹಿ.ಮ. ನಾಗಯ್ಯ ಅವರು ನನ್ನನ್ನು ಸಂದರ್ಶನ ಮಾಡಿದರು. ದೆಹಲಿಯ ಕರ್ನಾಟಕದ ಕಂಪು ಎಲ್ಲ ಕಡೆ ಪಸರಿಸಿತು. ಆದರೆ ನಮ್ಮ ಸಂಘದ ಕೀರ್ತಿ ಪತಾಕೆಯನ್ನು ಹಿಡಿದಿದ್ದು ಸಂಘದ ಪತ್ರಿಕೆ ಅಭಿಮತ. ದಿನದಿಂದ ದಿನಕ್ಕೆ ಇದರ ಗುಣಮಟ್ಟವನ್ನು, ನೋಟವನ್ನು ವರ್ಣಮಯವಾಗಿಸಿದ ಕೀರ್ತಿ ಶ್ರೀಮತಿ ಉಷಾ ಭರತಾದ್ರಿ, ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಮತ್ತು ಡಾ. ವೆಂಕಟಾಚಲ ಹೆಗಡೆ ಅವರುಗಳಿಗೆ ಸಲ್ಲಬೇಕು. ನಾಡಿನಲ್ಲಿ–ದೇಶ ವಿದೇಶದ ಸಂಘ ಸಂಸ್ಥೆಗಳಲಿ ಹೆಸರುವಾಸಿಯಾಗಿರುವ ಅಭಿಮತಕ್ಕೆ ಈಗ ಬೆಳ್ಳಿ ಹಬ್ಬ. ಇಂತಹ ಸಮಯದಲ್ಲಿ ಸಂಘ ತಪ್ಪದೇ ಎನ್.ಪಿ. ಭಟ್ಟರನ್ನು ನೆನೆಯಬೇಕು. ದಶಕಗಳ ಸಂಭ್ರಮವನ್ನು ಆಚರಿಸಿದಾಗ ಅಭಿಮತದ ಸಂಪಾದಕೀಯದಲ್ಲಿ ಪ್ರಯತ್ನ ಪೂರ್ವಕವಾಗಿ ನನ್ನ ಹೆಸರನ್ನು ಬೇಕಂತಲೇ ಬಿಟ್ಟರು. ಅದು ಖಂಡಿತ ನನಗೆ ನೋವನ್ನು ಉಂಟು ಮಾಡಲಿಲ್ಲ. ಅಭಿಮತಕ್ಕೆ ಪ್ರಾರಂಭದಲ್ಲಿ ಭಟ್ಟರ ಜೊತೆ ನನ್ನ ಪುಟ್ಟ ಕೈಗಳನ್ನು ಜೋಡಿಸಿದ್ದನ್ನು ಕೊಡುಗೆ ಎಂದು ಯಾರೂ ಹೇಳಬೇಕಾಗಿಲ್ಲ. ಕೂಸು ನನ್ನದಲ್ಲದಿದ್ದರೂ, ಬಾಣಂತಿಗೆ ಶುಂಠಿ ಲೇಹ್ಯವನ್ನು ತರುವಂತೆ ಮಾಡಿದ ಕೆಲಸ ನನ್ನದು. ಅಧ್ಯಕ್ಷನಾದಾಗ ನಾನು ಅಭಿಮತಕ್ಕೆ ಬರೆದ ಲೇಖನಗಳನ್ನು ಅವಹೇಳನ ಮಾಡಿದಾಗ ಸಹ ನನ್ನ ಮನಸ್ಸಿಗೆ ನೋವಾಗಲಿಲ್ಲ. ಏಕೆಂದರೆ ನಾನು ಕನ್ನಡದ ಲೇಖಕನಲ್ಲ. ಬರವಣಿಗೆ ನನ್ನ ಅಭಿವ್ಯಕ್ತಿಯ ಮಾಧ್ಯಮವಲ್ಲ. ಈ ದಿನಗಳಲ್ಲಿ ಸಂಘಕ್ಕೆ ಇನ್‌ಫೋಸಿಸ್‌ನ ನಾರಾಯಣ ಮೂರ್ತಿ, ನಂದನ್ ನೀಲೇಕಣಿ ಮತ್ತು ಹೆಸರಾಂತ ಕ್ರಿಕೆಟ್‌ಪಟು ಬ್ರಿಜೇಶ್ ಪಟೇಲರನ್ನು ಕರೆತಂದೆ. ಅವರನ್ನು ಸಂಘದ ಆಜೀವ ಸದಸ್ಯರನ್ನಾಗಿ ಮಾಡಿಸಿದೆ. ಕಾವೇರಿಯ ವಿವಾದದ ಬಗ್ಗೆ 18ಜನ ಸಂಸದರನ್ನು ಕರೆತಂದು ವಿಚಾರ ಸಂಕಿರಣ ನಡೆಸಿದೆ. ಇತರ ದಕ್ಷಿಣ ಭಾರತೀಯ ಸಾಂಸ್ಕೃತಿಕ ಸಂಘಗಳೊಡಗೂಡಿ ಜಂಟಿಯಾಗಿ ಕಾರ್ಯಕ್ರಮ ನಡೆಸಿದವು. ಸಂಘದಲ್ಲಿ ಬಿರುಕು ಜಾಸ್ತಿಯಾಯಿತು. ನಿಚ್ಚಳವಾಗಿ ಎರಡು ಗುಂಪುಗಳಾದವು. ಚುನಾವಣೆ ಕಾಲ ಬಂದಿತು. ಎನ್.ಪಿ. ಭಟ್ಟರನ್ನು ಕೈಬಿಟ್ಟು ನನ್ನನ್ನು ಮತ್ತೆ ಕಾರ್ಯದರ್ಶಿಯಾಗಿ ಮಾಡುತ್ತೇನೆ ಎಂದ ನಾಗರಾಜ. ನಾನು ಒಪ್ಪಲಿಲ್ಲ. ಇದ್ದರೆ ಭಟ್ಟರ ಒಟ್ಟಿಗೆ ಇಲ್ಲದಿದ್ದರೆ ನಾನು ನಿಮ್ಮ ಗುಂಪಿನಲ್ಲಿಲ್ಲ ಎಂದೆ. ಚುನಾವಣೆ ತಂತ್ರಗಳು ಮತ್ತು ಮುತ್ಸದ್ದಿತನ ನಮಗೆ ತಿಳಿದಿರಲಿಲ್ಲ. ನನ್ನ ಮತ್ತು ಭಟ್ಟರ ಗುಂಪು ಸೋಲನ್ನು ಎದುರಿಸಿತು.

ನಮ್ಮ ಜೊತೆ ಎಸ್.ಆರ್. ಕುಲಕರ್ಣಿ, ಮೀಮಾಂಸಿ ದಂಪತಿಗಳು ಇದ್ದರು. ವಾರ್ಷಿಕ ಸಭೆಯಲ್ಲಿ ಲೆಕ್ಕಪತ್ರ ಪರಿಶೀಲಿಸಲು ಕಾವಲು ಸಮಿತಿ ಬೇಕೆಂದು ನಾನು ಸೂಚಿಸಿದೆ. ಏಕೆಂದರೆ ಮುಂಬರುವ ದಿನಗಳಿಗೆ ಅದು ಒಂದು ಕಡಿವಾಣವಾಗುತ್ತಿತ್ತು. ನಾನು ಕಾವಲು ಸಮಿತಿಯನ್ನು ವಿರೋಧಿಸಿದೆ ಎಂದು ನಾಗರಾಜ, ಅಭಿಮತದಲ್ಲಿ ಬರೆಯಿಸಿದ. ನಾನು ರಿಜಿಸ್ಟರ್ಡ್ ಪತ್ರದ ಮೂಲಕ ಪ್ರತಿಕ್ರಿಯಿಸಿದೆ. ಅಂದಿನ ಸಂಪಾದಕರಾದ ಡಾ. ವೆಂಕಟಾಚಲ ಹೆಗಡೆ ಅವರು, ಇಂತಹ ವಿಷಯಗಳನ್ನು ಮೌಖಿಕವಾಗಿ ಚರ್ಚಿಸಬಹುದಲ್ಲ ಎಂದು ಪತ್ರ ಬರೆದರು. ನಾಗರಾಜ ಪ್ರತಿಕ್ರಿಯಿಸಿದ. ಅಭಿಮತದಲ್ಲಿ ನಾನೇ ಕಾವಲು ಸಮಿತಿಯನ್ನು ವಿರೋಧಿಸಿದೆ ಎಂದು ಮತ್ತೆ ಬರೆಯಿಸಿದ. ನಾನು ವಾರ್ಷಿಕ ಸಭೆಯ ನಡಾವಳಿಕೆಗಳ ಅಂಗೀಕಾರಕ್ಕೆ ಎರಡು ವರ್ಷ ಕಾಯಬೇಕಾಯಿತು. ನನ್ನ ಅದೃಷ್ಟಕ್ಕೆ ಯಾವ ತಿದ್ದುಪಡಿಯೂ ಇಲ್ಲದೆ ಸತ್ಯ ಹೊರಬಂತು. ಇಂದಿಗೂ ಮುದ್ರಿತ ಅಂಗೀಕೃತ 1992ರ ವಾರ್ಷಿಕ ಸಭೆಯ ನಡಾವಳಿಗಳನ್ನು ಯಾರು ನೋಡಿದರೂ ಅಲ್ಲಿ ಸ್ಪಷ್ಟವಾಗಿ ಕಾಣುತ್ತದೆ, ನಾನು ಕಾವಲು ಸಮಿತಯನ್ನು ಸೂಚಿಸಿದೆ ಎಂದು. 1994ರಲ್ಲಿ ಹಳೆಯ ನಡಾವಳಿಗಳು ಅನುಮೋದನೆಯಾಗಿ, 1996ರಲ್ಲಿ ಅದು ಮುದ್ರಿತವಾಗಿ ನನ್ನ ನಿಲುವನ್ನು ಹಾಗೂ ನನ್ನ ವ್ಯಕ್ತಿತ್ವವನ್ನು ಎತ್ತಿ ಹಿಡಿಯುವ ಮುದ್ರಿತ ಸಾಕ್ಷಿ ದೊರೆತಾಗ, ನಾನು ಕುಲಕರ್ಣಿ ಅವರಲ್ಲಿಗೆ

ಓಡಿ, ಮಾನನಷ್ಟ ಮೊಕದ್ದಮೆ ಹಾಕಬೇಕೆಂದು ಎಗರಾಡಿದೆ ಆದರೆ ಅವರು ಅನುಭವದ ಅರಿವಿದ್ದ highly matured ವ್ಯಕ್ತಿ. ಗೋಪಿನಾಥ್ ಈ ಮಂದಿ ಹೊಲಸು ಮಂದಿ, ನೀವು ಹೊಲಸಿನ ಮೇಲೆ ಕಲ್ಲು ಹೊಡೆಯುವ ಪ್ರಯತ್ನ ಬಿಡಿ ಎಂದರು. ಚುನಾವಣೆಯಲ್ಲಿ ನಾನು ಸೋತಾಗ ಕುಲಕರ್ಣಿ ಅವರು ನುಡಿದ ಮಾತಿದು–"You lost the election but I gained a friend". ಇಂದಿಗೂ ಕುಲಕರ್ಣಿ ಅವರು ನನಗೆ ಆತ್ಮೀಯರು. ಅಭಿಮತವನ್ನು ದುರುಪಯೋಗಪಡಿಸಿಕೊಂಡಿದ್ದು ವ್ಯಕ್ತಿಗಳ ಪ್ರಾಮಾಣಿಕತೆಗೆ ಪ್ರಶ್ನಾರ್ಥ ಚಿನ್ಹೆಯಾಗುತ್ತದೆ. ಎಲ್ಲ ದಾಖಲೆಗಳು ಇಂದಿಗೂ ನನ್ನ ಬಳಿ ಇದೆ. ವಸಂತ ಶೆಟ್ಟರಿಗೂ ನನಗೂ ತಾತ್ವಿಕವಾಗಿ ಒಂದೆರಡು ಬಾರಿ ಭಿನ್ನಾಭಿಪ್ರಾಯಗಳು ಮೂಡಿ ಬಂದರೂ ಸಹ ನಮ್ಮಿಬ್ಬರ ಸ್ನೇಹ ಗಟ್ಟಿಯಾಗಿಯೇ ಉಳಿಯಿತು. ಅವರು ಗುಣಗಳನ್ನು ಗುರುತಿಸಿ ನನಗೆ ಚೆನ್ನೈ ಕನ್ನಡ ಸಂಘದ ಪ್ರಶಸ್ತಿ ನೀಡಿದ್ದು ಅವರ ದೊಡ್ಡ ಗುಣ.

### ದೆಹಲಿಯ ಕನ್ನಡ ಶಾಲೆ

ಒಂದು ಸಾಂತ್ವನ ಬಹುಮಾನವಾಗಿ ಕುಲಕರ್ಣಿ ಅವರು ನನ್ನನ್ನು ಉಪಾಧ್ಯಕ್ಷನಾಗಿ ಶಾಲೆಗೆ ತಂದರು. ಸರ್ಕಾರದ Establishment Rules ನನಗೆ ಚೆನ್ನಾಗಿ ತಿಳಿದಿದ್ದರಿಂದ ಕೆಲವು ವಿಷಯಗಳಲ್ಲಿ ನಾನು ಶಾಲೆಗೆ ಸಹಾಯ ಮಾಡಿದೆ. ಯಾವುದೋ ಶಾಲೆಯ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದಿಂದ ತನಗೆ ಅನ್ಯಾಯವಾಗಿದೆ ಎಂದು ಶಾಲೆಯ ಒಬ್ಬ ಚಿಲ್ಲರೆಯ ಮನುಷ್ಯ ನನ್ನ ಕಾರ್ಯಾಲಯದ ವಿಳಾಸಕ್ಕೆ, ಅದು ದೂರ ಸಂಚಾರ ವಿಭಾಗದ ಮುಖ್ಯಸ್ಥರ ಮೂಲಕ ವಕೀಲರ ನೋಟೀಸು ಕಳಿಸಿದ. ಕಾರ್ಯಾಲಯಕ್ಕೆ ಕಳಿಸಿದರೆ ನಾನು ಹೆದರುತ್ತೇನೆ ಎಂದು ತಿಳಿದಿದ್ದರು. ನನ್ನ ಮುಖ್ಯಸ್ಥರು ನೋಟೀಸು ಏನು ಎಂದು ಕೇಳಿದರು, ನಾನು ಕಾರ್ಯಕಾರಿ ಸಮಿತಿಯ ಸಭೆಯ ದಿನಾಂಕ ಸೂಚಿಸಿ ನಕ್ಕೆ. ಓಹ್, ಅಂದು ನಾವಿಬ್ಬರೂ ಈಶಾನ್ಯ ರಾಜ್ಯಗಳ ಸಂಘಟನಾ ಸಭೆಯಲ್ಲಿ ಶಿಲ್ಲಾಂಗ್‌ನಲ್ಲಿ ಇದ್ದೆವಲ್ಲ ಎಂದು ಆ ಪತ್ರವನ್ನು ಕಸದಬುಟ್ಟಿಗೆ ಹಾಕಿದರು. ಅವರೆಂದರು ಎಲ್ಲಾ ಕಡೆಯಲ್ಲೂ ಚಿಲ್ಲರೆ ಮನುಷ್ಯರಿದ್ದಾರೆ, ಆದರೆ ಅವರನ್ನು ಆಡಿಸಿಕೊಳ್ಳುವ ಉಪಯೋಗ ಪಡೆದುಕೊಳ್ಳುವ ಲುಚ್ಚಾ ಮಂದಿ ಅವರ ಹಿನ್ನೆಲೆಯಲ್ಲಿರುತ್ತಾರೆ ಎಂದರು. ಇವರ ಮಾತು ಶಾಲೆಯ ಈ ಘಟನೆ ನೋಡಿದಾಗ ನೂರಕ್ಕೆ ನೂರು ಸತ್ಯವಾಗಿತ್ತು.

1992ರಲ್ಲಿ ನನಗೆ ಭಡ್ತಿಯಾಗಿ ಗುರುತರವಾದ ಜವಾಬ್ದಾರಿ ಕೊಟ್ಟಿದ್ದರಿಂದ ನಾನು ಸಂಘದಿಂದ ದೂರ ಉಳಿದೆ. 2002ರಲ್ಲಿ ಶ್ರೀ ಜಿ.ಟಿ. ನಾರಾಯಣ ರಾಯರು ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನು ನನಗೆ ಕೊಡಬೇಕೆಂದು ಕರ್ನಾಟಕ ಸರ್ಕಾರಕ್ಕೆ ಬರೆದರು. ನಾನು ಶ್ರಮಿಸಿದ ಅನೇಕ ಕರ್ನಾಟಕ ಸಂಘಗಳಲ್ಲಿ ಕೆಲಸ ಹಾಗೂ ಮಾಡಿದ ಹಿಮಾಲಯಗಳ ಬಗ್ಗೆ ಬಹಳ ಪ್ರಸಿದ್ಧವಾದ ದೃಶ್ಯ–ಶ್ರಾವ್ಯ ಪ್ರಸ್ತುತಿಗಳು, ನಾನು ನಿರ್ದೇಶಿಸಿದ ಸಾಕ್ಷ್ಯಚಿತ್ರಗಳು ಹಿನ್ನೆಲೆಯಾಗಿದ್ದವು. ದೆಹಲಿ ವಿಳಾಸವಿದ್ದುದರಿಂದ ಸಂಸ್ಕೃತಿ ಇಲಾಖೆಯ ಐ.ಎ.ಎಸ್. ಅಧಿಕಾರಿಗಳನ್ನು ನನ್ನ ಬಗ್ಗೆ ಮಾಹಿತಿ ಪಡೆಯಲು ಸರ್ಕಾರ ಕೇಳಿತು. ಅವರು ಕರ್ನಾಟಕ ಭವನವನ್ನು ಸಂಪರ್ಕಿಸಿದರು. ಕನ್ನಡವೇ ಬಾರದ ಆಯುಕ್ತರು ನನ್ನ ಹೆಸರು ತಿಳಿದಿಲ್ಲ ಎಂದರು. ದೆಹಲಿ ಕರ್ನಾಟಕ ಸಂಘವನ್ನು ಸಂಪರ್ಕಿಸಿದಾಗ ಸಿ.ವಿ. ಗೋಪಿನಾಥ್ ಅನ್ನುವ ವ್ಯಕ್ತಿ ದೆಹಲಿಯಲ್ಲೇ ಇಲ್ಲವೆಂದರು. ಐ.ಎ.ಎಸ್. ಅಧಿಕಾರಿಗಳ ಕಿವಿ ಚುಚ್ಚಿದರು. ರಂಗಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದು, ನಾಟಕ ಅಕಾಡೆಮಿಯಲ್ಲೂ ಇದ್ದ ವ್ಯಕ್ತಿ, ಅವರಿಗೂ ಸಂಘಕ್ಕೂ ಗಳಸ್ಯ. ನಾನು ಆಧ್ಯಾತ್ಮಿಕ ಕ್ಷೇತ್ರದಲ್ಲಿ ಮಾಡಿದ ಪ್ರಗತಿ ಯಾರಿಂದಲೂ ಅಳಿಸಲಾಗಲಿಲ್ಲ. ತಡವಾಗಿಯಾದರೂ ಪ್ರಶಸ್ತಿ 2004ರಲ್ಲಿ ಬಂದಿತು. ದೆಹಲಿ ಕನ್ನಡಿಗನಿಗೆ ಬರುವ ಪ್ರಶಸ್ತಿಯ ಬಗ್ಗೆ ಹೆಮ್ಮೆಪಡುವ ಬದಲು, ಅಸೂಯೆ ಕೆಲಸವನ್ನು ಮಾಡಿತ್ತು. 1994 ಮತ್ತು 2004ರ ನಡುವೆ ಸಂಘದಲ್ಲಿ ಅನೇಕ ಬಣಗಳಾದವು. ಅವು ಜಾತಿಯ ಆಧಾರದ ಮೇಲಾದ ಬಣಗಳು, ವೃತ್ತಿಯ ಆಧಾರದ ಮೇಲೆ ಆದ ಬಣಗಳೂ. ಸರ್ಕಾರದಲ್ಲಿ ಕೆಲಸ ಮಾಡುತ್ತಿದ್ದ ವ್ಯಕ್ತಿಗಳು ಸಂಘದ ರಾಜಕೀಯ ನೋಡಿ ಅಸಹ್ಯಗೊಂಡು ಬರುತ್ತಿರಲಿಲ್ಲ. ಸಂಘಕ್ಕೆ, ಕನ್ನಡಕ್ಕೆ ಸೇವೆ ಎನ್ನುವುದು ಪ್ರವೃತ್ತಿಯಾಗಲಿಲ್ಲ. ಅದು ವೃತ್ತಿಯಾಯಿತು. ಕನ್ನಡವೇ ಬಾರದ ಅಧ್ಯಕ್ಷರುಗಳನ್ನು ಸಂಘಕ್ಕೆ ತಂದು ನಿಲ್ಲಿಸಿದ ಶ್ರೇಯ ನಾಗರಾಜನಿಗೆ ಸಲ್ಲಬೇಕು. ಕನ್ನಡದ ಬಗ್ಗೆ ಕಳಕಳಿ, ಸ್ವತಃ ಸಾಹಿತಿಗಳಾದ ಎನ್.ಪಿ. ಭಟ್ಟರನ್ನು ನಾಗರಾಜ "ಜೋಕರ್" ಎಂದು ಕರೆದ. ದೆಹಲಿ ಕರ್ನಾಟಕ ಸಂಘದ ಇತಿಹಾಸದಲ್ಲಿ ದಾಖಲೆಯಾದ ಕನ್ನಡ ಬಾರದ ಅಧ್ಯಕ್ಷರುಗಳು ಇಂಗ್ಲಿಷ್‌ನಲ್ಲಿ, ಹಿಂದಿಯಲ್ಲಿ ಮಾತನಾಡಿದಾಗ "ಜೋಕರ್" ಯಾರೆಂದು ಜನರಿಗೆ ಅರಿವಾಯಿತು. ಜೆ.ಪಿ. ಚಳುವಳಿಯಂತೆ ಗಾಳಿ ಬೀಸಿ ನಾಗರಾಜನ ಆಡಳಿತಕ್ಕೆ ವಿರಾಮ ತಂದಿತು. ದುರದೃಷ್ಟವೆಂದರೆ ಜಾತಿಯ ಪಿಡುಗು, ಕರ್ನಾಟಕ ಸಂಘದ ಹೊಲಸನ್ನು ಪ್ರತಿಬಿಂಬಿಸುತ್ತಿತ್ತು.

> ನಿಯಮಗಳನ್ನು ಸಡಿಲಿಸದೇ, ಯಾವ ಕೆಲಸಕ್ಕೂ ಅಂಟಿಕೊಳ್ಳದೇ ಜಾತೀಯ ಜಗಳಗಳನ್ನು ಎದುರಿಸುತ್ತಾ, ಯಾವ ಒತ್ತಡಕ್ಕೂ ಮಣಿಯದ ದಿನಗಳು ನನ್ನ ದೆಹಲಿಯ ಕರ್ನಾಟಕ ಸಂಘದ ಅಧ್ಯಕ್ಷತೆಯ ಎರಡು ವರ್ಷಗಳು.

### ಕುಲಕರ್ಣಿ ಮತ್ತು ಪುರುಷೋತ್ತಮ ಬಿಳಿಮಲೆ ಅವರ ಬಲವಂತಕ್ಕೆ ನಾನು ಕಟ್ಟುಬಿದ್ದೆ

ಎಷ್ಟೇ ಸರಿ ನಾನು ಅಧ್ಯಕ್ಷ ಸ್ಥಾನಕ್ಕೆ ಚುನಾವಣೆಯಲ್ಲಿ ನಿಲ್ಲುವುದಿಲ್ಲವೆಂದರೂ, ನನ್ನ ಬದಲಿಗೆ ಉತ್ಸಾಹಿಗಳಾದ ವಸಂತ ಶೆಟ್ಟರನ್ನು ಅಧ್ಯಕ್ಷರನ್ನಾಗಿ ಮಾಡಿರೆಂದು ಕೇಳಿಕೊಂಡರೂ ಚುನಾವಣೆ ಅರ್ಜಿಗೆ ನನ್ನ ಸಹಿ ಹಾಕಿಸಿದರು. ನಾನು ಒರಟು ಮನುಷ್ಯ, ನೇರವಾಗಿ ಮಾತನಾಡುವುದರಿಂದ ನಿಮ್ಮ ಗುಂಪಿಗೇ ತೊಂದರೆಯಾಗುತ್ತದೆ, ಯಾವ ಬಗ್ಗೆಯ ಒಪ್ಪಂದಗಳೂ ನನಗೆ ಸಾಧ್ಯವಿಲ್ಲ ಎಂದು ಹೇಳಿದರೂ ಕೇಳಲಿಲ್ಲ. ನನ್ನನ್ನು ಅಧ್ಯಕ್ಷನನ್ನಾಗಿ ಮಾಡಿದರು. ನಮ್ಮ ಗುಂಪಿಗೆ ನಿಚ್ಚಳವಾದ ಬಹುಮತ ಬರಲಿಲ್ಲ. ನಾಗರಾಜನ ಬೆನ್ನಿಗೆ ಚೂರಿ ಹಾಕಿದವರೂ, ನಾಗರಾಜನೇ ಹುಟ್ಟಿ ಬೆಳೆಸಿದ ಜನರು ಅವನನ್ನು ಸೋಲಿಸಿದರು. ಅವನ ಗರಡಿಯಲ್ಲಿ ಕಲಿತ ತಂತ್ರಗಳನ್ನು ಅವನ ಮೇಲೆ ಉಪಯೋಗಿಸಿದರು. ನಾನು ಕಾರ್ಯದರ್ಶಿಯಾಗುವ ಮುನ್ನ ಒಬ್ಬ ಗೂಂಡಾ ಭಸ್ಮಾಸುರನನ್ನೂ ನಾಗರಾಜ ಸೃಷ್ಟಿ ಮಾಡಿ ಬಳಸಿಕೊಂಡಿದ್ದ. ನಾನು ವಿಷ್ಣುಮಾಯೆಯ ರೂಪದಲ್ಲಿ ಪರಿಹಾರ ಮಾಡಿದ್ದೆ.





ದೆಹಲಿ ಕರ್ನಾಟಕ ಸಂಘದ ರಾಜಕೀಯ, ಕರ್ನಾಟಕದ ರಾಜಕೀಯ ಪಕ್ಷಗಳನ್ನು ಮೀರಿ ಮೇಲೇರಿತ್ತು. ಇಂದು ನನ್ನೊಂದಿಗಿದ್ದರೆ, ನಾಳೆ ಬೇರೆಯವನೊಬ್ಬನೊಂದಿಗೆ, ಅಧ್ಯಕ್ಷನಾದ ಎರಡು ವರ್ಷಗಳಲ್ಲಿ ಜಾತಿ ದ್ವೇಷಗಳ ಪರಮಾವಧಿಯನ್ನು ನಾನು ಕಂಡೆ. 40 ವರ್ಷಗಳ ಕಾಲ ಭಾರತ ಸರ್ಕಾರದಲ್ಲಿ, ನಿನ್ನ ಜಾತಿ ಏನು ಎಂದು ಯಾರೂ ಕೇಳಿರಲಿಲ್ಲ. ಈ ಎರಡು ವರ್ಷಗಳಲ್ಲಿ, ನೇರವಾಗಿ, ಅನೇರವಾಗಿ– ನೀನು ಬ್ರಾಹ್ಮಣ, ನಾವು ಬೇರೆಯವರ ಉದ್ಧಾರಕರು ಎಂದು ತಾವು ದಲಿತರ ಅಲ್ಪ ಸಂಖ್ಯಾತರ ಉದ್ಧಾರದ ಗುತ್ತಿಗೆ ಹಿಡಿದಿದ್ದೇನೆ ಎಂದು ಕೊಚ್ಚಿಕೊಳ್ಳುತ್ತಾ, ತಮ್ಮ ಬದುಕಿನಲ್ಲೇ ತಾವು ಬೋಧನೆ ಮಾಡುವ ತತ್ವಗಳಲ್ಲಿ ಏನನ್ನೂ ಅಳವಡಿಸಿಕೊಳ್ಳದ ಈ ಢೋಂಗೀ ಬುದ್ಧಿಜೀವಿಗಳು ಸಂಘವನ್ನು ತಾಕುಗಳನ್ನಾಗಿ ಮಾಡಿದರು. ಮುಂಚೂಣಿಗೆ ಯುದ್ಧಕ್ಕೆ ಬರದೆ ನೇಪಥ್ಯದಿಂದ ಕಳ್ಳ ಹೆಸರಿನಲ್ಲಿ ಬರೆಯುವ ಈ ಮಂದಿಯೊಡನೆ ಒಡನಾಟ ನನಗೆ ಹೇಸಿಗೆಯೆನಿಸಿ ಸಂಘದ ಚಟುವಟಿಕೆಗಳಿಂದ ದೂರವಾಗಿ ದ್ವೀಪವಾದೆ. ಮತ್ತೊಂದೆಡೆ ಕರ್ನಾಟಕ ಸರ್ಕಾರದ ಭ್ರಷ್ಟಾಚಾರದ ಪಿಡುಗು. ವಿಷದವಾಗಿ ಘಟನೆಗಳನ್ನು ಹೇಳುತ್ತಾ ನನ್ನ ಮನಸ್ಸಿನ ಕಹಿಯನ್ನು ಕಾರುವುದಕ್ಕೆ ಇಷ್ಟವಿಲ್ಲ. ನನ್ನ ಶಿಸ್ತು, ನಿಷ್ಠೆ, ನಿಯಮಗಳು ಮತ್ತು ಪ್ರಾಮಾಣಿಕತೆಗಳನ್ನು ಸಡಿಲಮಾಡಬೇಕೆಂದು ಸ್ನೇಹಿತರು ಸಲಹೆ ಮಾಡಿದರು. ನನ್ನ ಮನಸ್ಸು ಒಪ್ಪಲಿಲ್ಲ. ಸಂಘದಲ್ಲಿ ಅಲ್ಪ ಸಂಖ್ಯಾತರ ಪ್ರತಿನಿಧಿಯನ್ನು ನಾನು ಕಾರ್ಯಕಾರಿ ಸಮಿತಿಗೆ ನಾಮಾಂಕಿತ ಸದಸ್ಯನನ್ನಾಗಿ ಮಾಡಿ ದೆಹಲಿ ಕರ್ನಾಟಕ ಸಂಘದಲ್ಲಿ ಇತಿಹಾಸ ರಚಿಸಿದೆ. ಬುದ್ಧಿಜೀವಿಗಳು ನನ್ನನ್ನು ಇಸ್ಲಾಂ ವಿರೋಧಿ ಎಂದೂ ಕರೆದರು. ಇವರಿಗೆ ಇಬ್ಬರು ಒಳ್ಳೆಯ ಮುಸ್ಲಿಮರಿಂದ ಉತ್ತರ ದೊರೆಯಿತು. ಅವರು ನಿಚ್ಚಳವಾಗಿ ಬರೆದರು. ಬುದ್ಧಿಜೀವಿಗಳು ನಡೆಸುತ್ತಿರುವುದು ಅಂತರ ಧರ್ಮೀಯ ಸಂಘರ್ಷವಲ್ಲ,

ನನ್ನ ಶಿಸ್ತು, ನಿಷ್ಠೆ, ನಿಯಮಗಳು ಮತ್ತು ಪ್ರಾಮಾಣಿಕತೆಗಳನ್ನು ಸಡಿಲಮಾಡಬೇಕೆಂದು ಸ್ನೇಹಿತರು ಸಲಹೆ ಮಾಡಿದರು.

ಅಂತರಜಾತೀಯ ಸಂಘರ್ಷ ಎಂದು. ಸಮಾಜದಲ್ಲಿ ನಡೆತೆಗೆಟ್ಟವನು ಎಂದು ಬಿರುದು ಪಡೆದ ವ್ಯಕ್ತಿ ನನಗೆ ನೈತಿಕತೆಯ ಪಾಠವನ್ನು ಅಂತರ್ಜಾಲದಲ್ಲಿ ತಿಳಿಯ ಬಯಸಿದ. ಇಂತಹ ಸಮಯಗಳಲ್ಲಿ ನನ್ನ ನೋವನ್ನು ಐ.ಎ.ಎಸ್. ಅಧಿಕಾರಿಗಳಾಗಿದ್ದ, ಆತ್ಮೀಯರಾದ ವಿ.ವಿ. ಭಟ್ಟರಲ್ಲಿ ಹಂಚಿಕೊಂಡು ಸಮಾಧಾನಪಟ್ಟಿದ್ದೇನೆ.

ನಿಯಮಗಳನ್ನು ಸಡಿಲಿಸದೇ, ಯಾವ ಕೆಲಸಕ್ಕೂ ಅಂಟಿಕೊಳ್ಳದೇ ಜಾತೀಯ ಜಗಳಗಳನ್ನು ಎದುರಿಸುತ್ತಾ, ಯಾವ ಒತ್ತಡಕ್ಕೂ ಮಣಿಯದ ದಿನಗಳು ನನ್ನ ದೆಹಲಿಯ ಕರ್ನಾಟಕ ಸಂಘದ ಅಧ್ಯಕ್ಷತೆಯ ಎರಡು ವರ್ಷಗಳು. ಆದರೆ ಬೇರೆ ಆಯಾಮಗಳಲ್ಲಿ ನಾನು ದೆಹಲಿಯಲ್ಲಿ ಬೆಳೆದೆ. ಇಂದಿಗೂ ತಿಂಗಳಲ್ಲಿ ಹತ್ತು ದಿನಗಳನ್ನು ದೆಹಲಿಯಲ್ಲಿ ನಾನು ಕಳೆಯುತ್ತೇನೆ. ಮೈಸೂರಿನಲ್ಲಿ, ಬೇರೆ ಬೇರೆ ಸಂಸ್ಥಾನಗಳಲ್ಲಿ ಮಕ್ಕಳೊಡನೆ ಅವರಿಗೆ ಮೌಲ್ಯಗಳನ್ನು ಬಿತ್ತುವ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿದ್ದೇನೆ. ದೆಹಲಿಯ ಅನೇಕಾನೇಕ ಸರ್ಕಾರಿ, ಗೈರು ಸರ್ಕಾರಿ ಸಂಸ್ಥೆಗಳಲ್ಲಿ ನನಗೆ ಒಳ್ಳೆಯ ಹೆಸರಿದೆ.

ಸಂಘದ ಸಿಬ್ಬಂದಿಯ ಬಗ್ಗೆ, ಈ ಲೇಖನ ಮುಗಿಸುವ ಮುನ್ನ ಎರಡು ಮಾತನ್ನು ಹೇಳಬೇಕು. ಬಾಲಚಂದ್ರ, ಶೇಖರ್ ಮತ್ತು ದೇವಯ್ಯನವರನ್ನು ಎಂದೂ ನೌಕರರಂತೆ ಕಂಡಿಲ್ಲ. ಸ್ನೇಹಿತರಂತೆ ಕಂಡೆ, ವರ್ತಿಸಿದೆ. ಕೆಲವು ದಿನ ಬಾಲಚಂದ್ರ ಅವರಿಗೆ ನನ್ನ ಮೇಲೆ ಅಸಮಾಧಾನವಿತ್ತು. ಯಾರೋ ಲುಚ್ಚ ಬರೆದ ಪತ್ರವನ್ನು ನಾನು ಬರೆದೆನೆಂದು ಊಹಿಸಿದ್ದರು. ಇದೀಗ, ನಾನು ಆ ಪತ್ರದ ಕರ್ತೃವಲ್ಲ ಎಂದು ಅವರಿಗೆ ಅರಿವಾಗಿರಬಹುದು. ಸಂಘದ ಆವರಣದಲ್ಲೇ ಇದ್ದ ಉಪಹಾರ ಗೃಹದ ಮ್ಯಾನೇಜರ್ ಸಂಸ್ಕಾರವಂತರಾದ ಶರೀಫ್ ಅವರು. ಅವರು ನನ್ನ ಮೇಲೆ ತೋರಿಸಿದ ಆದರ–ಪ್ರೇಮ ಇಂದಿಗೂ ಬೆಳೆಯುತ್ತಿರುವ ನಮ್ಮೀರ್ವರ ನಡುವಿನ ವಿಶ್ವಾಸ ಅನಂತವಾಗಿ ಕಾಣುತ್ತದೆ. ಈ ನಾಲ್ವರಿಗೆ ನಾನು ಋಣಿ. ಸಂಘ ನನ್ನ ಕುಟುಂಬಕ್ಕೆ ದೊರಕಿಸಿಕೊಟ್ಟ ಮಿತ್ರರೆಂದರೆ ಶ್ರೀಮತಿ ಸುಮಿತ್ರಾ ರಾವ್ ಅವರು ಮತ್ತು ಡಾ. ಅಹಲ್ಯಾ ಚಿಂತಾಮಣಿ ಅವರು. ಕೆ.ಎಸ್.ಜಿ. ಶೆಟ್ಟಿಯವರಂತಹ ಪ್ರಾಮಾಣಿಕ ವ್ಯಕ್ತಿಯನ್ನೂ ಸಂಘ ಸರಿಯಾಗಿ ಉಪಯೋಗಿಸಿಕೊಳ್ಳಲಿಲ್ಲ.

ವಾರ್ಷಿಕ ಸಭೆಯಲ್ಲಿ ಕೆಲ ಮಂದಿ ಮಾಡಿದ ಟೀಕೆಗಳನ್ನು ಕೇಳಿ ನನ್ನ ಮಡದಿಯ ಮನಸ್ಸಿಗೆ ನೋವಾಯಿತು. ನನಗೆ ಯಾವ ಬಗೆಯ ನೋವು ಸಹ ಆಗಲಿಲ್ಲ. ಗೋಸಂಬೆ ರೂಪದ ಒಬ್ಬ ವ್ಯಕ್ತಿಯನ್ನು ನಾನು ನಂಬಬಾರದಿತ್ತು. ಊರ ದನ ಕಾದು ದೊಡ್ಡ ಬೋರೇಗೌಡ ಎಂದು ಹೇಳುತ್ತಾರೆ. ಅಧ್ಯಕ್ಷತನದ ಅವಧಿಯಲ್ಲಿ ನಾನು ಸಂಸ್ಕೃತಿಯನ್ನು ಕಾಯಲಾಗದಿದ್ದರೂ ಸಂಘದ ಧನ ಕಾಯ್ದಿದ್ದೇನೆ. ದೆಹಲಿಯ ನೆನಪು ಸಿಹಿ ಒಗಚು ಮತ್ತು ಕಹಿ ಇಂದ ಕೂಡಿದೆ.

ಋಣಾತ್ಮಕವಾದ ಧೋರಣೆ ಎಂದು ತಿಳಿಯಬೇಡಿ. ಸಂಘದಲ್ಲಿ ಜಾತಿಯ ದ್ವೇಷದ ಕುಲುಮೆಯಲ್ಲಿ ಮುಂದಿನ ನಾಯಕರನ್ನು ತಯಾರು ಮಾಡುವುದನ್ನು ಇನ್ನೂ ಮಂದಿ ನಿಲ್ಲಿಸಿಲ್ಲ. ಡಿ.ವಿ.ಜಿ. ಅವರ ಮಾತು ನೆನಪಿಗೆ ಬರುತ್ತಿದೆ, "ಎತ್ತಲಿದಕೆಲ್ಲ ಕಡೆ ಮಂಕುತಿಮ್ಮ?" ಅ